
# ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್ 2019

## ನವೆಂಬರ್
## ರಾಜ್ಯೋತ್ಸವ ಮಾಸ




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ





# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**

**ಸಂಚಿಕೆ - 2**

**ನವೆಂಬರ್- 2019**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಡೈರೆಕ್ಟೇ ಕಿಡ್ನಾಪ್ | ವೈ. ಎನ್. ಗುಂಡೂರಾವ್ | 5 |
| ಈ ಸಂಭಾಷಣೆ | ಸೂರಿ ಹಾರ್ದಳ್ಳಿ | 9 |
| ಎಸ್‌ಕೇಸೀ ಅಂದ್ರೆ ... | ಶ್ರೀಧರ ಬಾಣಾವರ | 14 |
| ತುಂತುರು | ದಂನಳ | 17 |
| ಕಳ್ಳನ ಮೇಲೂ ಕರುಣೆ! | ಎಚ್. ಶಾಂತರಾಜ ಐತಾಳ | 18 |
| ಗೊಂಬೆ ನೋಡಿ ಗಾದೆ ... | ಶ್ರೀಮತಿ ಸೀತಾಲಕ್ಷ್ಮಿ | 20 |
| ಕಾರ್ಡ್ ಮಾಡಿಸ್ಕೊಳ್ಳಿ.. | ವಸುಮತಿ ಉಡುಪ | 22 |
| ಚೋರ ಪುರಾಣ | ಟಿ.ಎಸ್. ಶ್ರವಣ ಕುಮಾರಿ | 28 |
| ಟು ಡೈ ಆರ್ ನಾಟ್ ಟು ಡೈ | ಡಾ. ಎಸ್. ಸುಧಾ | 30 |
| ಮನಸೆಂಬ ಕೋತಿ...... ! | ಎಚ್. ಗೋಪಾಲಕೃಷ್ಣ | 32 |
| ಗಿಡ್ಡ ಹೆಸರು | ಜಿ.ವಿ.ನಿರ್ಮಲ | 35 |
| ಮಾಡೆಲ್ ರೈಲ್ವೆ ಕಾಲೋನಿ | ಇ.ಆರ್. ರಾಮಚಂದ್ರನ್ | 37 |


**ಮುಖಪುಟ ವ್ಯಂಗ್ಯಚಿತ್ರ : ಜಿ. ಎಸ್. ನಾಗನಾಥ್**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. ಸಂಪರ್ಕ : email: koravanjiaparanji@gmail.com ದೂ: 9845264304

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಬಡತನದ ಬಗ್ಗೆ ಸಂಶೋಧನೆ ಮಾಡಿ ಪ್ರಖ್ಯಾತರಾದ ಬ್ಯಾನರ್ಜಿ ಅವರಿಗೆ ಅಪರಂಜಿಯ ಶುಭಾಶಯಗಳು!!

★★★★★

ಮೆಡಿಕಲ್ ಸೀಟು ಅಕ್ರಮ; ತನಿಖೆ – ಸುದ್ದಿ

**ಈ ಪರಂಪರೆ ಎಂದು ನಿಲ್ಲುವುದೋ!!**

★★★★★

ಐಷಾರಾಮಿ ಕಾರುಗಳ ಸೇವಾ ಕೇಂದ್ರ ಆರಂಭ – ಸುದ್ದಿ

**ದುರ್ಭಿಕ್ಷದಲ್ಲಿ.....!!**

★★★★★

ಫ್ರೀಡಂ ಪಾರ್ಕಿನ ಬಳಿ ಸಂಚರಿಸಲು ನಮಗೆ ಫ್ರೀಡಂ ಇಲ್ಲ ಎಂದು ಬೆಂಗಳೂರಿಗರು ವ್ಯಥೆ ಪಟ್ಟರಂತೆ!!

★★★★★

ಕಾಗೇರಿ ಪಟ್ಟು : ಸಿದ್ದರಾಮಯ್ಯ ಸಿಟ್ಟು – ಶೀರ್ಷಿಕೆ

**ಶೀರ್ಷಿಕೆ ಅಂದರೆ ಹೀಗೆ ಇರಬೇಕು!!**

★★★★★

ಜಿನ್‌ಪಿಂಗ್ ಅವರು ತಮ್ಮ ಕಾರಿನಲ್ಲೇ ಭಾರತ ಪ್ರವಾಸ ಕೈಗೊಂಡರಂತೆ – ಸುದ್ದಿ

**ಹೌದು, ಎಲ್ಲೆಲ್ಲೂ ಅವರದೇ ಕಾರುಬಾರು!!**

★★★★★

ಶನಿಯ ಸುತ್ತ ಇನ್ನೂ 20 ಉಪಗ್ರಹಗಳು ಪತ್ತೆ – ವರದಿ

**ಅಮೆರಿಕಾ ಕೈವಾಡವಿರಬಹುದು!!**

★★★★★

ದೇಶಿ ಶಸ್ತ್ರಾಸ್ತ್ರಗಳನ್ನೇ ಬಳಸಿ ಯುದ್ಧ ಗೆಲ್ಲುತ್ತೇವೆ – ಹೇಳಿಕೆ

**ಮಹಾತ್ಮರ ಆತ್ಮ ನೊಂದಿತಂತೆ!!**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ನಮ್ಮ ಅಕ್ಟೋಬರ್ ಸಂಚಿಕೆಯನ್ನು ಮೆಚ್ಚಿ ಅನೇಕರು ನಮಗೆ ಬರೆದಿದ್ದಾರೆ. ಮೈಸೂರಿನಿಂದ ರಾಘವೇಂದ್ರ ಭಟ್ಟರು, ''ಸಂಚಿಕೆಯನ್ನು ಒಂದೇ ಸಿಟ್ಟಿಂಗ್‌ನಲ್ಲಿ ಓದಿ ಮುಗಿಸಿದ ನಂತರವೇ ನಾನು ಮಲಗಲು ಹೋಗಿದ್ದು. ಬರಹಗಳೆಲ್ಲಾ ಅಷ್ಟು ಚೆನ್ನಾಗಿದ್ದವು'' ಎಂದು ಬರೆದರೆ, ಶ್ರೀಮತಿ ಉಮಾ, ಶ್ರೀ ಪ್ರಕಾಶ್, ಶ್ರೀ ಶ್ರೀರಾಮ್ ಮತ್ತಿತರ ಅನೇಕರು ಸಂಚಿಕೆಯನ್ನು ''ಒಂದು ವಿನೂತನ ಪ್ರಯತ್ನ'' ಎಂದು ಕರೆದು ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ. ನಮ್ಮ ಪ್ರಯತ್ನವನ್ನು ಮೆಚ್ಚಿದ ಎಲ್ಲ ಓದುಗ ಬಾಂಧವರಿಗೂ ಅಪರಂಜಿಯ ನಮ್ಮ ಕೃತಜ್ಞತೆಗಳು.

ಅಕ್ಟೋಬರ್ ಸಂಚಿಕೆಯ ಥೀಮ್ ''ಹಗಲೇ ಎಲ್ಲ, ರಾತ್ರಿ ಇಲ್ಲ'' ಎಂದಾಗಿತ್ತಲ್ಲವೇ. ಸಂಚಿಕೆಯ ತಯಾರಿಯ ಕೆಲಸವನ್ನೆಲ್ಲಾ ಮುಗಿಸಿ, ಮುದ್ರಣಕ್ಕೆ ಕಳಿಸಿದ ನಂತರ, ಈ ಥೀಮ್ ಮತ್ತೆ ಮತ್ತೆ ನನ್ನನ್ನು ಕಾಡಲು ಶುರು ಮಾಡಿತು. ಸ್ವಲ್ಪ ಆಲೋಚನೆಯ ನಂತರ ಕಾರಣವೂ ಹೊಳೆಯಿತೆನ್ನಿ. ತೀರ ಹತ್ತಿರದ ಭವಿಷ್ಯದಲ್ಲಿ ಜಾಗತಿಕ ತಾಪಮಾನ ಏರಿ ಜಗತ್ತಿನ ಜೀವಸಂಕುಲವೆಲ್ಲಾ ಪರದಾಡುವಂತಾಗುವ ಕರಾಳ ಸತ್ಯ ಈ ಕಾಡುವಿಕೆಗೆ ಕಾರಣವಾಗಿತ್ತು. ಈ ಸಮಯದಲ್ಲೇ ಅಕಸ್ಮಾತ್ತಾಗಿ ಯೂಟ್ಯೂಬ್ ಸರ್ಫ್ ಮಾಡುತ್ತಿದ್ದಾಗ ಜೇನ್ ಫಾಂಡಾಳ ಒಂದು ಕ್ಲಿಪ್ ಕಣ್ಣಿಗೆ ಬಿತ್ತು. ಅದರಲ್ಲಿ ಜೇನ್- ಪರಿಸರ ನಾಶ, ತಾಪಮಾನ ಏರಿಕೆ, ಜನಮಾನಸದಲ್ಲಿ ಈ ಬಗ್ಗೆ ಇರುವ ದಿವ್ಯನಿರ್ಲಕ್ಷ್ಯ, ಇವೆಲ್ಲದರ ಬಗ್ಗೆ ಬಹು ಮನೋಜ್ಞವಾಗಿ, ಆಪ್ತವಾಗಿ ತನ್ನ ಆತಂಕವನ್ನು ಹಂಚಿಕೊಂಡಿದ್ದಳು.


ಜೇನ್ ಫಾಂಡಾ, ನಮ್ಮ ಕಾಲದ ವೆಸ್ಟರ್ನ್ ಮೂವಿಗಳ ಹೀರೋ ಹೆನ್ರಿ ಫಾಂಡಾನ ಮಗಳು. ''ಛಾಪ್‌ಮನ್ ರಿಪೋರ್ಟ್'', ''ಫಾದರ್ಸ್ ಎಂಡ್ ಡಾಟರ್ಸ್'' ಇವೇ ಮುಂತಾದ ಮರೆಯಲಾಗದ ಚಿತ್ರಗಳಲ್ಲಿ ಮಿಂಚಿ, ಯುವಕ ಸಮೂಹಕ್ಕೆ ಮುದ ತುಂಬಿದ ಹದಿಹರೆಯದ ಜೇನ್‌ಗೆ ಈಗ ಎಂಭತ್ತು ವರ್ಷ ಅಂತ ಗೊತ್ತಾದಾಗ ಒಂದು ಅವ್ಯಕ್ತ ವಿಷಾದದ ಭಾವನೆ ನನ್ನನ್ನು ಆವರಿಸಿದ್ದು ಸುಳ್ಳಲ್ಲ. ಭಾವನೆ ಹೇಗಾದರೂ ಇರಲಿ, ಆಕೆ ಅಷ್ಟು ಕಳಕಳಿಯಿಂದ ಮಾತನಾಡುತ್ತಿದ್ದ ಪರಿಸರ ನಾಶದ ವಿಷಯ ನಿಜಕ್ಕೂ ಭಯಾನಕವಾಗಿತ್ತು. ಪರಿಸರ ನಾಶಕ್ಕೆ ಅನೇಕ ಆಯಾಮಗಳಿವೆ. ಮೊದಲಿಗೆ ಪೆಟ್ರೋಲ್, ಡೀಜಲ್‌ಗಳನ್ನು ಬಳಸುವ ವಾಹನಗಳಿಂದ ಹೊರಹೊಮ್ಮುವ ಗ್ರೀನ್‌ಹೌಸ್ ಗ್ಯಾಸ್‌ಗಳನ್ನು ವಾತಾವರಣಕ್ಕೆ ತುಂಬಿದಾಗ ಇಲ್ಲಿನವರೆಗೆ ಭೂಮಂಡಲಕ್ಕೆ ರಕ್ಷಣೆ ನೀಡುತ್ತಿರುವ ಓಝೋನ್ ಲೇಯರ್ ಕರಗಿ, ಜಾಗತಿಕ ತಾಪಮಾನ ಹಂತಹಂತವಾಗಿ ಏರಿ ಆರ್ಕ್‌ಟಿಕ್ ಮತ್ತು ಅಂಟಾರ್‌ಕ್ಟಿಕ್‌ಗಳಲ್ಲಿರುವ ಹಿಮಗಡ್ಡೆಗಳು ಕರಗಲು ಪ್ರಾರಂಭವಾಗುತ್ತವೆ. ಕರಗಿದ ನೀರು ಸಮುದ್ರಗಳನ್ನು ತುಂಬಿ ಸಮುದ್ರದ ಮಟ್ಟ ಏರಲು ತೊಡಗುತ್ತದೆ. ಮಾಲ್ಡಿವ್ಸ್ ಮುಂತಾದ ಸಮುದ್ರ ಮಟ್ಟದಲ್ಲಿರುವ ದ್ವೀಪಗಳು ಮುಳುಗಡೆಯಾಗಲು ಕೇವಲ ಒಂದೂವರೆ ಅಡಿ ಏರಿಕೆ ಸಾಕು. ದ್ವೀಪಗಳ ಮುಳುಗಡೆ ಹಾಗಿರಲಿ, ಹಿಮಗಡ್ಡೆಗಳನ್ನೇ ಆಶ್ರಯಿಸಿ

ವಿಕಸನಗೊಂಡಿರುವ ಜೀವಸಂಕುಲ, (ಹಿಮ ಕರಡಿ, ಪೆಂಗ್ವಿನ್ ಇತ್ಯಾದಿ) ಜೀವಿಸಲು ತಾಣವಿಲ್ಲದೇ ನಶಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಇಷ್ಟು ಗ್ರೀನ್ ಹೌಸ್ ಗ್ಯಾಸ್‌ಗಳ ಕಥೆಯಾದರೆ, ಅರಣ್ಯ ನಾಶ, ಪರಿಸರ ನಾಶದ ಇನ್ನೊಂದು ಆಯಾಮ. ಇದರಿಂದ ಉಸಿರಾಟದಲ್ಲಿ ನಾವು ಹೊರಬಿಡುವ ಇಂಗಾಲದ ಡೈ ಆಕ್ಸೈಡ್ ಅನ್ನು ಸ್ವೀಕರಿಸಿ ನಮಗೆ ಅಗತ್ಯವಾದ ಆಮ್ಲಜನಕವನ್ನು ನೀಡುವ ಮರಗಿಡಗಳೇ ನಾಶವಾಗಿ, ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಮಟ್ಟ ಹೆಚ್ಚುತ್ತದೆ. ಹೆಚ್ಚಿದ್ದರೇನಂತೆ ಅಂತ ನೀವು ಕೇಳಬಹುದು. ಇದೂ ಸಹಾ ಒಂದು ಗ್ರೀನ್ ಹೌಸ್ ಗ್ಯಾಸ್. ಪರಿಸರ ನಾಶದ ಮೂರನೆಯ ಆಯಾಮವೆಂದರೆ ಪ್ಲಾಸ್ಟಿಕ್ ಬಳಕೆ. ನಾವು ಬಳಸಿ ಎಸೆದ ಪ್ಲಾಸ್ಟಿಕ್ ಚೀಲಗಳನ್ನು ತಿಂದು ಹಾನಿಗೀಡಾಗುವ ಹಸು ಮತ್ತಿತರ ಪ್ರಾಣಿಗಳ ಬಗ್ಗೆ ನೀವು ಕೇಳಿರಬಹುದು. ಸಮುದ್ರದಲ್ಲಿ ತೇಲಾಡುತ್ತಿರುವ ಸಹಸ್ರಾರು ಟನ್ ಗಟ್ಟಲೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತಿಂದು ಸಾಗರದಲ್ಲಿನ ಜೀವಿಗಳು ತೀವ್ರ ಹಾನಿಗೆ ಈಡಾಗುತ್ತಿವೆ.

ಇದೆಲ್ಲವನ್ನೂ ದಡ್ಡ ಮಕ್ಕಳಿಗೆ ಹೇಳುವಂತೆ ಬಿಡಿಸಿ ಬಿಡಿಸಿ ಹೇಳಿದ್ದನ್ನು ಕೇಳಿಸಿಕೊಂಡನಂತರ, ಟಿ.ವಿ. ಆರಿಸಿ, ಈ ಬಗ್ಗೆ ನಾವು ಏನು ಮಾಡಬಹುದು ಅಂತ ಯೋಚಿಸಿದೆ. ಅಪರಂಜಿ ಬಳಗದ ಗೆಳೆಯರೊಂದಿಗೆ ಮಾತನಾಡಿದ ನಂತರ ಮುಂದಿನ ಸಂಚಿಕೆಯೊಂದನ್ನು ''ಪರಿಸರ ಜಾಗೃತಿ ವಿಶೇಷಾಂಕ'' ಎಂದು ಹೊರತರುವ ನಿರ್ಣಯ ಮಾಡಿದೆವು.

ಈ ಸಂಚಿಕೆಯಲ್ಲಿ ಪರಿಸರ ರಕ್ಷಣೆ ಕ್ಷೇತ್ರದಲ್ಲಿನ ತಜ್ಞರಿಂದ ನಿಖರವಾದ ವೈಜ್ಞಾನಿಕ ಮಾಹಿತಿ ಕೊಡುವ ಲೇಖನಗಳನ್ನು ಪಡೆದು ಪರಿಸರ ರಕ್ಷಣೆಯ ವಿವಿಧ ಆಯಾಮಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವುದು ಒಂದು ಮುಖ್ಯ ಉದ್ದೇಶ. ನಾವು ಈ ಬಗೆಯಲ್ಲಿ ಪರಿಸರ ಜಾಗೃತಿ ಸಂಚಿಕೆ ತರುತ್ತಿರುವುದು ಇದೇ ಮೊದಲು. ಇದರ ಬಗ್ಗೆ ಓದುಗರ ಉತ್ಸಾಹವನ್ನು ತಿಳಿಯಲು ಒಂದು ಸ್ನಾಪ್ ಪೋಲ್ ಕೈಗೊಂಡಿದ್ದೇವೆ. ಪರಿಸರ ಕುರಿತು ನಿಮ್ಮ ಕಾಳಜಿಯನ್ನು ದಾಖಲಿಸಲು ನಮ್ಮ koravanjiaparanji@gmail.com ಗೆ ಒಂದು ಮೇಲ್ ಕಳಿಸಿ. ಈ ಅಭಿಪ್ರಾಯ ಸಂಗ್ರಹಣೆಯ ಫಲಶ್ರುತಿಯನ್ನು ವಿಶೇಷ ಸಂಚಿಕೆಯಲ್ಲಿ ತಿಳಿಸುತ್ತೇವೆ.

ಪರಾಭವ ಪ್ರಿಯರಾದ ಬೆಂಗಳೂರಿನ ರಾಯಲ್ ಛಾಲೆಂಜರ್ಸ್ ಟೀಮಿನವರು ಪ್ರತಿ ಐಪಿಎಲ್ ಆವೃತ್ತಿಯಲ್ಲಿ ಒಂದು ಮ್ಯಾಚ್ ಅನ್ನು ಹಸಿರುಡುಗೆ ತೊಟ್ಟು ಆಡುವುದನ್ನು ನೀವು ನೋಡೇ ಇರುತ್ತೀರಿ. ಅಂತೆಯೇ ಮುಂದಿನ ತಿಂಗಳು ಅಪರಂಜಿ ಹಸಿರುಡುಗೆ ತೊಟ್ಟು ನಿಮ್ಮಲ್ಲಿಗೆ ಬರುತ್ತಾಳೆ. ಅವಳನ್ನು ಪ್ರೀತಿಯಿಂದ ಸ್ವಾಗತಿಸಿ.




■

# ಡೈರಕ್ಟ್ರೇ ಕಿಡ್ನಾಪ್

● ವೈ. ಎನ್. ಗುಂಡೂರಾವ್

ಪ್ರತಿದಿವಸದ ಧಾರಾವಾಹಿಯ ಎಪಸೋಡ್‌ಗೂ ಕತೆಯನ್ನು ಸುತ್ತಿ ಸುತ್ತಿ ಸುಸ್ತಾಗಿ ಹೋಗಿದ್ದರು ಸಂಚಿಕೆಯ ಮೂವರು ನಿರ್ದೇಶಕರುಗಳು. ಏನ್ಸಾರ್ ಮಾಡೋದು ಎಂದು ಪ್ರಧಾನ ನಿರ್ದೇಶಕರ ಹತ್ತಿರ ತಮ್ಮ ಕಷ್ಟವನ್ನು ತೋಡಿಕೊಂಡು ಟಿವಿ ಧಾರಾವಾಹಿಯನ್ನು ಹೇಗೆ ಮುಂದುವರೆಸುವುದು ಎಂದು ತಮ್ಮ ಅಸಹಾಯಕತೆಯನ್ನು ಮುಂದಿಟ್ಟರು.

"ಮಾಡೀಪ್ಪ, ಏನಾದ್ರೂ ಮಾಡೀಪ್ಪ, ಬೇರೆ ಚಾನಲ್‌ಗಳ ಧಾರಾವಾಹಿಗಳು ತೋಪೆದ್ದು ಹೋಗಿವೆ ಅಂತ್ಲೆ ನಮ್ಮ ಧಾರಾವಾಹಿಗೆ ಸ್ವಲ್ಪ ಟಿಆರ್‌ಪಿ ಸಿಕ್ಕಿದೆ. ಬಂದಷ್ಟು ಗುಂಜ್ಕೋಬೇಕಲ್ವಾ? ಹಾಗೇ, ಬೇರೆ ಭಾಷೆಯ ಧಾರಾವಾಹಿಗಳನ್ನೂ ನೋಡೀಪ್ಪ. ಅಲ್ಪ ಸ್ವಲ್ಪ ಕದ್ರೂ ಕನ್ನಡಿಗರಿಗೇನೂ ಗೊತ್ತಾಗೋಲ್ಲ. ಯಾಕಂದ್ರೆ, ಕನ್ನಡ ಸೀರಿಯಲ್‌ಗೆ ಅಡಿಕ್ಟ್ ಆದವ್ರು ಬೇರೆ ಭಾಷೆ ಧಾರಾವಾಹಿ ನೋಡೋಲ್ವಲ್ಲ"

ಹೌದು ಸರ್, ಅದನ್ನೂ ಮಾಡಿದ್ದಾಯ್ತು

ಕುಟುಂಬದೊಳಗೆ ಜಗಳ ತಂದಿಡಿ, ಪರ-ವಿರೋಧ ನಾಲ್ಕು ನಾಲ್ಕು ಜನ ಇರಲಿ, ಆದ್ರೆ ಒಬ್ಬರ ಥಿಂಕಿಂಗ್ ಇನ್ನೊಬ್ರ ಹತ್ರ ಹೇಳ್ಕೊಳೋಕೆ ಆಗದ ತರಹ ಸಂದರ್ಭ ಸೃಷ್ಟಿಸಿ. ಇನ್ನೇನು ಹೇಳ್ಕೊಂಡ್ರು ಅನ್ನೊವಾಗ ಕಾಲಿಂಗ್ ಬೆಲ್ ಸದ್ದಾಗಲಿ. ನಿಜ ಹೇಳೋಕೆ ಹೊರಟವರು ಬಾಗಿಲು ತೆಗೆಯಲು ಹೋಗುವಂತೆ ಮಾಡಿಬಿಡಿ. ಇಲ್ಲ ಅವರಿಗೊಂದು ಫೋನ್ ಕಾಲ್ ಬರೋ ತರಹ ಮಾಡಿ. ಒಬ್ರು ಸ್ನೇಹಿತರನ್ನು ಹುಟ್ಟು ಹಾಕಿ. ಸಿಟೀಲಿ ಕೆಲ್ಸವಿದೆ ಬರ್ತಿದ್ದೇವೆ. ನಿಮ್ಮನೇಲೇ ಒಂದು ವಾರ ಇರ್ಬೇಕಾಗುತ್ತೆ ಅಂತ ಬಂದವರ ಕೈಲಿ ಹೇಳ್ಸಿ. ಅಲ್ಲಿಗೆ ಒಂದು ವಾರ ಸುಲಭವಾಗಿ ಎಳೀಬೋದಲ್ವಾ. ಇದೆಲ್ಲಾ ನಾನು ಹೇಳ್ಬೇಕೇನ್ರೀ. ನೀವು ಮೂವರು ಇದರಲ್ಲೆಲ್ಲಾ ಎಕ್ಸ್‌ಪರ್ಟ್ ಅಲ್ವಾ ಅಂದರು.

ಸಾರ್, ಮನೆಯೊಳಗೆ ಒಂದು ಜಗಳ ಕ್ರಿಯೇಟ್ ಮಾಡಿದ್ವಿ. ಅವರವರಲ್ಲೇ ಅಪನಂಬಿಕೆ ಹುಟ್ಟು ಹಾಕಿದ್ವಿ. ಜಗಳಕ್ಕೆ ಕಾರಣ ಆ ಮನೆಯಲ್ಲೇ ಇರೋ ಒಬ್ರು ಲೇಡಿ ವಿಲನ್‌ನಿಂದ ಅನ್ನೋ ವಿಷ್ಯ ಇನ್ನೇನು ಮನೆ ಮಂದಿಗೆಲ್ಲಾ ಗೊತ್ತಾಗೇ ಹೋಯಿತು ಅನ್ನೋವಾಗ ಗೇಟಲಿ ನಾಯಿ ಬೊಗಳಿಸಿದ್ವಿ. ಅರೆ, ಡಿಂಕು ಹಾಕೆ ಬೊಗುಳ್ತಿದೆ ಅಂತಾ ಇಬ್ರೂ ಅಲ್ಲಿಗೆ ಓಡಿ ಹೋದ್ರು. ನೋಡಿದ್ರೆ ಮನೆಮಗಳಾದ ಕಾಲೇಜು ಕನ್ಯೆಯ ಸ್ನೇಹಿತೆ ಸೂಟ್ ಕೇಸ್ ಹಿಡ್ದು ಗೇಟಲ್ಲಿ ನಿಂತಿದ್ಲು. ಸರಿ ಅವಳಿಗೆ ಅದ್ದೂರಿ ಸ್ವಾಗತ, ಅವಳೊಡನೆ ಮನೆಮಂದಿಯೆಲ್ಲರ ಹರಟೆ, ಸಿನಿಮಾ, ಮಾಲ್ ಎಲ್ಲಾ ಸುತ್ತಿಸಿದ್ದಾಯ್ತು.

ಒಂದ್ವಾರ ಎಳಿದ್ರಾ?

ಒಂದ್ವಾರ ಏನ್ಸಾರ್ ಒಂದು ತಿಂಗಳು ಎಳಿದ್ವಿ.

ಅದೂ ಆಗೋಯ್ತಾ? ಮತ್ತೇನು ಮಾಡಬಹುದು ಎಂದು ತಲೆ ಕೆರೆದುಕೊಂಡ ಪ್ರಧಾನ ನಿರ್ದೇಶಕರು " ಕಿಡ್ನಾಪ್ ಮಾಡಿಸಿಬಿಡಿ" ಎಂದರು.

ಯಾರನ್ನು ಮಾಡಿಸೋದು ಸರ್, ಮನೆಯಲ್ಲಿ ಒಂಭತ್ತು ಪಾತ್ರಗಳಿವೆ. ಪ್ರತಿಯೊಬ್ಬರನ್ನೂ ಎರಡೆರಡು ಸಾರಿ ಕಿಡ್ನಾಪ್ ಮಾಡಿಸಿಯಾಯ್ತು. ವೇಷ ಬದಲಿಸಿ ಸ್ವಸ್ಥಾನ ಸೇರಿಸಿದ್ದಾಯ್ತು. ಫಾರಿನ್‌ಗೆ ಕಳ್ಸಿದ್ದಾಯ್ತು. ಹಳ್ಳಿಗೆ ಕಳ್ಸಿದ್ದಾಯ್ತು, ಎಲ್ಲೆಲ್ಲಿಗೆ ಕಳಿಸಬಹುದೋ ಅಲ್ಲಿಗೆಲ್ಲಾ ಕಳ್ಸಿದ್ದಾಯ್ತು. ಇನ್ನು ಪಾತ್ರಧಾರಿಗಳನ್ನು ಮೇಲಕ್ಕೆ ಕಳಿಸೋದೊಂದು ಬಾಕಿ.

"ವೆರಿಗುಡ್ ಐಡಿಯಾ ಸತ್ತಂತೆ ಮಾಡಿ ಭೂತ ಸೃಷ್ಟಿಸಿಬಿಡಿ"

ಸಾರ್ ಆ ಕುಟುಂಬಕ್ಕೆ ಭೂತದ ಕಾಟ ಆಯ್ತು. ಕೋಲ ಹಾಕ್ಸಿದ್ದಾಯ್ತು. ಬೊಬ್ಬರ್ಯನನ್ನ ಕರೆಸಿದ್ದಾಯ್ತು. ಮಾಟ ಮಾಡ್ಸಿದ್ದಾಯ್ತು., ಮೋಡಿ ಹಾಕ್ಸಿದ್ದಾಯ್ತು. ಇನ್ನೇನೂ ಉಳಿದಿಲ್ಲ ಸರ್.

ಭೇಷ್, ಭೇಷ್ ಎಲ್ಲಾನೂ ಮಾಡ್ಬಿಟ್ಟಿದ್ದೀರ. ಹಾಗಾದ್ರೆ ಇನ್ನೊಂದು ಐಡಿಯಾ ಕೊಡ್ತೇನೆ ಮಾಡಿ. ಕುಟುಂಬಕ್ಕೆ ಸೇರಿದ ಜಮೀನಿನಲ್ಲಿ ನಿಧಿಯಿದೆ ಅಂತ ರೈತನೊಬ್ಬನಿಂದ ಹೇಳಿಸಿಬಿಡಿ. ಮನೆಯ ಸದಸ್ಯರು ನಿಧಿ ಹುಡುಕಿಕೊಂಡು ಒಬ್ಬರಿಗೆ ತಿಳಿಯದಂತೆ ಇನ್ನೊಬ್ಬರು ಹೊರಡುವಂತೆ ಮಾಡಿಬಿಡಿ.

ಸಾರ್ ಅದೂ ಆಯ್ತು ಸರ್, ನಿಧಿನೂ ಇಲ್ಲ ಏನೂ ಇಲ್ಲ ಅಂತ ಊರವರು ಷೂಟಿಂಗಿಗೆ ತಡೆಯೊಡ್ಡಿದರು ಸರ್.

ಥತ್ತೇರಿಕೆ, ಊರ ಮುಖಂಡ ಪಟೇಲರಿಗೋ ಶಾನುಭೋಗರಿಗೋ ಒಂದಷ್ಟು ಹಣ ಚೆಲ್ಬೇಕಾಗಿತ್ತು.

ಅದು ವರ್ಕ್ಔಟ್ ಆಗ್ಲಿಲ್ಲ ಸರ್.

ಹೋಗ್ಲಿ ನಮ್ಮ ಧಾರಾವಾಹಿಯ ಬಗ್ಗೆ ಜನ ಏನಂತಾರೆ ರೀ.

ಉಗಿದು ಉಪ್ ಹಾಕ್ತಾ ಇದಾರೆ ಸರ್, ಪೇಪರಲ್ಲೆಲ್ಲಾ ಇದೇ ಸುದ್ದಿ. ಎಲ್ಲಾ ಮ್ಯಾಗಜೀನ್‌ನವ್ರೂ ಒಂದು ಕಾಲಂ ಷುರು ಮಾಡಿ ಬೈಯೋದಕ್ಕೆ ಹೊರಟಿದ್ದಾರೆ ಸರ್. ಕನ್ನಡ ಧಾರಾವಾಹಿ ತೆಗೆಯೋರಿಗೆ ಏನಾಗಿದೆ? ಮನೆಯೊಳಗೆ ಜಗಳ ಇಬ್ಬಿಬ್ರು ಹೆಂಡ್ತೀರು ಅದೇ ಕೊಲೆ, ಅದೇ ಲೇಡಿ ಡಾನ್ ಅದೇ ಲೇಡಿ ವಿಲನ್‌ಗಳು ಇನ್ನೇನು ಲೇಡಿ ವಿಲನ್‌ನ ಕುತಂತ್ರ ಬಯಲಾಯ್ತು. ಸಧ್ಯ ಧಾರಾವಾಹಿ ಮುಗಿಯುತ್ತೆ ಅನ್ನೋವಾಗ ಅದೇ ವಿಲನ್ ಅಟ್ಟಕ್ಕೇರಿಸಿ ಗೆದ್ದಂತೆ ಮಾಡ್ತಾರೆ. ಎಷ್ಟು ದಿವಸಾಂತ ವಿಲನ್ ಗೆಲ್ಲೋದನ್ನ ನೋಡ್ತಾ ಇರೋಕಾಗುತ್ತೆ. ಹೀರೋನೂ ಒಂದ್ಸಾರಿ ಗೆಲ್ಲಬೇಕಲ್ವ. ಸಿನಿಮಾದಲ್ಲಿ ಹೀಗಿಲ್ಲ. ಹೀರೋ ಗೆದ್ದೇ ಗೆಲ್ತಾನೆ. ಇಲ್ಲಿ ವಿಲನ್‌ಗಳದೇ ಆರ್ಭಟ. ಈ ಧಾರಾವಾಹಿ ಮುಗಿಯಲ್ಲ ಬೇರೆ ಧಾರಾವಾಹಿ ಷುರುವಾಗೋಲ್ಲ ಅಂತಾ ಬೈದು ಉಪ್ಪಿನಕಾಯಿ ಹಾಕ್ತಿದಾರೆ ಸರ್.

ಎರಡು ದಿವಸ ಟೈಂ ಕೊಡಿ ಬೇರೆ ತರಾನೇ ಮಾಡೋಣ ಅಂದ್ರು ಪ್ರಧಾನ ನಿರ್ದೇಶಕರು. ಸಂಚಿಕೆ ನಿರ್ದೇಶನದ ಮೂವರು ನಿರ್ದೇಶಕರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ನಗುತ್ತಾ ಎದ್ದು ಹೋದರು.

***

ಮಾರನೆಯ ದಿನ ಎಲ್ಲಾ ಪತ್ರಿಕೆಗಳಲ್ಲಿ ಒಂದೇ ಸುದ್ದಿ "ಧಾರಾವಾಹಿಯ ಪ್ರಧಾನ ನಿರ್ದೇಶಕರೇ ಕಿಡ್ನಾಪ್", ಅದರ ಜೊತೆಗೆ ಪ್ರತಿಕ್ರಿಯೆಗಳ ಸುರಿಮಳೆ.

ನಿರ್ದೇಶಕರನ್ನು ಹುಡುಕಿಸಿ ಅನ್ನೋಕಿಂತ ಐದು ವರ್ಷದಿಂದ ನಮ್ಮ ತಲೆ ತಿಂತಿದ್ರು. ಆ ಪ್ರಧಾನ ನಿರ್ದೇಶಕರನ್ನು ಹುಡುಕಬೇಡ್ರೀ, ಕಿಡ್ನಾಪರ್ಸ್‌ನ ಹುಡುಕ್ಕೊಂಡು ಹೋಗಬೇಡಿ, ಧಾರಾವಾಹಿಯ ಎಷ್ಟೋ ಪಾತ್ರಗಳನ್ನು ಕಿಡ್ನಾಪ್ ಮಾಡಿಸಿ ಹಿಂಸೆ ಕೊಡ್ತಿದ್ರು, ಈಗ ಅವರೂ ಸ್ವಲ್ಪ ಚಿತ್ರ ಹಿಂಸೆ ಅನುಭವಿಸಲಿ, ಡೆನ್ ಒಳಗೇ ಕೊಳೀಲಿ.

ಎಲ್ಲಾ ಮ್ಯಾಗಸೀನ್‌ಗಳಲ್ಲೂ ಪತ್ರಿಕೆಗಳಲ್ಲೂ ಇದೇ ಪ್ರತಿಕ್ರಿಯೆ. ವಾರ್ತಾವಾಹಿನಿಗಳಲ್ಲೂ ಇದೇ ಬಿಸಿ ಬಿಸಿ ಸುದ್ದಿ, ಧಾರಾವಾಹಿಯ ಪ್ರಧಾನ ನಿರ್ದೇಶಕರು ಕಿಡ್ನಾಪ್. ■

# ಅಪರಂಜಿ ಬಳಗಕ್ಕೆ ಆಹ್ವಾನ

ಆತ್ಮೀಯ ಓದುಗರೇ

**ನಿಮ್ಮ ಬಂಧು ಬಳಗ ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೆ ಪ್ರತಿ ತಿಂಗಳು ನಿಮ್ಮನ್ನು ಹೃದಯತುಂಬಿ ನೆನೆಸಿಕೊಳ್ಳುವಂಥಾ ಒಂದು ಸುವರ್ಣ ಅವಕಾಶ ನಿಮ್ಮ ಮುಂದಿದೆ.** ಅದು ಅಪರಂಜಿಯ ಓದುಗ ಬಳಗವನ್ನು ಹೆಚ್ಚಿಸುವುದು. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಬಂಧುಗಳಿಗೆ / ಸ್ನೇಹಿತರಿಗೆ ನೀವು ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಹುದು. **ಪ್ರತಿ ತಿಂಗಳು ಅಪರಂಜಿ ಅವರ ಮನೆಗೆ ಹೋದಾಗ ಅವರು ನಿಮ್ಮನ್ನು ಕೃತಜ್ಞತಾಭಾವದಿಂದ ನೆನೆಯುತ್ತಾರೆ.** ಅದಕ್ಕೆ ನೀವು ಈ ಕೆಳಗಿನ ಅರ್ಜಿಯನ್ನು ತುಂಬಿ ನಮಗೆ ಕಳಿಸಿದರೆ ಸಾಕು. ನಂತರದ ದಿನಗಳಲ್ಲಿ ಅಪರಂಜಿ ನಿಮ್ಮ ಬಂಧುಗಳ/ಸ್ನೇಹಿತರ ಮನೆಗೆ ಅಂಚೆಯಲ್ಲಿ ತಲಪುತ್ತದೆ. **ಪ್ರತಿ ಹೊಸ ಚಂದಾದಾರರಿಗೆ ಹತ್ತು ವರ್ಷದ ಚಂದಾ ರೂ. 750/– ರಂತೆ ಚೆಕ್/ಡಿಡಿ/ ಆನ್‌ಲೈನ್ ಮೂಲಕ ಕೊರವಂಜಿ ಕಾರ್ಯಾಲಯದ ವಿಳಾಸಕ್ಕೆ ಅಥವಾ ಸಂಪರ್ಕ ವಿಳಾಸಕ್ಕೆ ಅಥವಾ ಬ್ಯಾಂಕ್ ಮೂಲಕ ಸಲ್ಲಿಸಬಹುದು.** ಬ್ಯಾಂಕ್ ವಿವರಗಳನ್ನೂ ಕೊಟ್ಟಿದ್ದೇವೆ.

## ಅರ್ಜಿ ನಮೂನೆ

ಇವರಿಂದ : ಹೆಸರು...........................................................................

ಚಂದಾದಾರರ ಸಂಖ್ಯೆ...........................................................................

**ಉಡುಗೊರೆಯಾಗಿ ಅಪರಂಜಿಯನ್ನು ಪ್ರತಿ ತಿಂಗಳೂ ಈ ಕೆಳಕಂಡ ವಿಳಾಸಗಳಿಗೆ ತಲುಪಿಸಿ.**

1) ಹೆಸರು...........................................................................

ವಿಳಾಸ...........................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

2) ಹೆಸರು...........................................................................

ವಿಳಾಸ...........................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

| | |
|---|---|
| **Account Name** | **: KORAVANJI APARANJI TRUST** |
| **Account Number** | **:** 109804180000056 |
| **IFSC Code** | **:** SVCB0000098 |
| **Name of the Bank** | **:** SVC CO-OPERATIVE BANK LTD |
| **Branch Code /Name** | **:** MALLESHWARAM |
| **Account Type** | **:** CURRENT |

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

**Civil Contractors for Complete Construction Activities**

Mob: 9740968677

# ಈ ಸಂಭಾಷಣೆ

● **ಸೂರಿ ಹಾರ್ದಳ್ಳಿ**

'ರೀ. ಬನ್ರಿ ಒಳಗೆ.'

'ಏನೇ ಅದು?'

'ಆಹಾ, ಏನೂ ಗೊತ್ತಿಲ್ಲದ ಕಳ್ಳ ಬೆಕ್ಕು. ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ನನಗೆ ತಿಳಿಯದೇ?'

'ಬೆಕ್ಕು, ಹಾಲು ಒಗಟೊಗಟಾಗಿಯೇ ಅನ್ನುತ್ತೀಯಲ್ಲ, ಬಿಡಿಸಿ ಹೇಳಬಾರದಾ?'

'ಹೌದು, ನಾನು ಏನು ಹೇಳಿದರೂ ಒಗಟೇ ನಿಮಗೆ. ಏನು ಮಾಡ್ತಿದ್ರಿ ಹೊರಗಡೆ ಸಿಟ್‌ಔಟ್‌ನಲ್ಲಿ? ಪಾಪದ ಮಕ್ಕಳ ಹಾಗೆ?'

'ಓ ಅದಾ? ಸಂಜೆಯ ಹೊತ್ತು. ತಂಪಾದ ಗಾಳಿ ಬೀಸ್ತಾ ಇತ್ತು. ಉದಯಿಸುತ್ತಿರುವ ಚಂದ್ರನನ್ನ ನೋಡ್ತಾ ಇದ್ದೆ.'

'ಓ.. ಉದಯಿಸುವ ಚಂದಮಾಮ. ಯಾವ ಬಟ್ಟೆ ಹಾಕ್ಕೊಂಡಿತ್ತು? ಅಲ್ಲಲ್ಲ, ಹಾಕ್ಕೊಂಡಿದ್ಳು?'

'ಅಲ್ಲ ಕಣೇ, ಏನಾಗಿದೆ ನಿನಗೆ? ಚಂದ್ರ ಎಂದಾದರೂ ಬಟ್ಟೆ ತೊಡುತ್ತಾನ? ಅದೂ ಅಲ್ಲದೇ ಅವನನ್ನು ಸ್ತ್ರೀಲಿಂಗದಲ್ಲಿ ಕರೆಯೋಲ್ಲ.'

'ಓ, ನಿಮ್ಮದು ಎಕ್ಸರೇ ಕಣ್ಣು. ಅದಕ್ಕೇ ಬಟ್ಟೆ ತೊಟ್ಟರೂ ದುಣ್ಣಗೇ ಕಾಣಿಸೋದು.'

'ಏನಾಗಿದೆ ನಿನಗೆ ಇವತ್ತು? ಹೊರಗೆ ಕುಳಿತುಕೊಳ್ಳುವುದೂ ತಪ್ಪಾ?'

'ಇಲ್ಲವಾ? ಇಲ್ಲ ಪಾಪ. ಅದಾರಿಗೆ ನೀವು ಹಲೋ ಅಂದಿದ್ದು? ಆ ಪಕ್ಕದ ಮನೆಯ ಚಂದ್ರಮುಖಿಗಾ? ಆಹಾ, ಅದೇನು ರಾಗ, ಶಾಳೆ, ವಯ್ಯಾರ. ಆ ಹಲೋದಲ್ಲಿ ಎರಡು ಕಿಲೋ ಸಕ್ಕರೆ, ಒಂದು ಲೀಟರ್ ಜೇನಿನ ರುಚಿಯಿತ್ತಲ್ಲ, ಅದನ್ನು ನಾನು ಎಂದಿದ್ದು.'

'ಅಯ್ಯೋ ದೇವರೇ, ಮಾತಿನಲ್ಲಿ ಸಕ್ಕರೆ, ಜೇನು ಇರುತ್ತಾ? ಇದ್ದರೆ ನನ್ನ ಮೈಗೆ ಆಗುತ್ತಾ? ಏನೇನೋ ಹೇಳ್ತೀಯಾ ನೀನು.'

'ಮಳ್ಳರ ಹಾಗೆ ಆಡಬೇಡಿ. ಏನು ಅವಳ ಹೆಸರು? ಅದೇ ನಿಮ್ಮನ್ನ ಹಾಯ್ ಎಂದವಳದ್ದು? ಪಕ್ಕದ ಮನೆಗೆ ಹೊಸದಾಗಿ ಬಂದವಳು ಅವಳು. ಅವಳ ಹೆಸರೇನು?'

'ಏನೋ ಗೊತ್ತಿಲ್ಲ. ಒಮ್ಮೆ ನನ್ನತ್ತ ತಿರುಗಿದಳು, ಹಾಯ್ ಎಂದಳು. ನಾನೂ ಎಂದೆ. ನನಗೇನು ಗೊತ್ತು ಅವಳ ಕುಲ-ಗೋತ್ರಗಳೆಲ್ಲಾ.'

'ಗೊತ್ತಿಲ್ಲದವರಿಗೇ ಹೀಗಂದರೆ ಗೊತ್ತಿರುವವರ ಜೊತೆಗೆ ಹೇಗಿರ್ತಿರೋ. ನನಗೆ ಯಾವತ್ತೋ ಅನಿಸಿತ್ತು, ಎಂದೂ ಸಂಜೆ ಹೊರಗಿನ ಸಿಟ್ ಔಟ್‌ಗೆ ಹೋಗದವರು ಇವತ್ತು ಯಾಕೆ ಹೋಗಬೇಕಿತ್ತು? ಏನೋ ಕಾರಣ ಇದೇಂತ.'

'ನಮ್ಮ ಮನೆ, ನಮ್ಮ ಮನೆಯ ಸಿಟ್ ಔಟು. ಹೊರಗೆ ಹೋಗಿರಬಹುದು. ಇದರಲ್ಲಿ ತಪ್ಪೇನು?'

‘ನೋಡಿ, ನೀವು ಹೀಗೆಲ್ಲಾ ಹೇಳಿ ನನ್ನನ್ನ ಮೂರ್ಖಳನ್ನಾಗಿಸಬೇಕಿಲ್ಲ. ಅವಳು ಸೀರೆ ಉಟ್ಟಿದ್ದಳೋ, ಲಂಗದಲ್ಲಿ ಇದ್ದಳೋ, ನೈಟಿಯೋ ಇಲ್ಲಾ ’

‘ಛೇ, ಛೇ, ಬೇರೆಯವರು ಯಾವ ಡ್ರೆಸ್ಸಿನಲ್ಲಿ ಇದ್ದಾರೆ ಎಂದು ನೋಡೋದೇ ನನ್ನ ಚಟ ಅಂದುಕೊಂಡಿದ್ದೀಯಾ? ಹೀಗೆಲ್ಲಾ ನೀನು ವಾದಿಸಬಾರದು. ಅದೂ ಇಪ್ಪತ್ತು ವರ್ಷ ಸಂಸಾರ ನಡೆಸಿದವನೊಡನೆ.’

‘ಮತ್ತೆ, ಮತ್ತೆ, ಇಪ್ಪತ್ತು ವರ್ಷವಾಯಿತು, ಎಂದಾದರೂ ಆ ಥರ ನನ್ನೊಡನೆ ಹಲೋ ಎಂದಿದ್ದೀರ ನೀವು?’

‘ಸರಿ ಬಿಡು. ಈಗ ‘ಹಲೋ,’ ಅಂತೀನಿ. ಸಾಕಲ್ಲ?’

‘ಆಹಾ, ಬರೀ ತುಟಿಯಿಂದ ಅಂದರೆ ಸಾಕೇ? ಹೃದಯದಿಂದ ಬರಬೇಕು.’

‘ಹೃದಯದಿಂದ? ಮಾತು ಬರೋದೇ ಬಾಯಿಯಿಂದ ಅಲ್ಲವಾ?’

‘ಮತ್ತೆ, ಮದುವೆಗೆ ಮೊದಲು ಹೇಳ್ತಿದ್ದಿರಿ, ನಾನು ನಿನ್ನನ್ನು ಹೃದಯದಲ್ಲಿ ಬಚ್ಚಿಟ್ಟಿದ್ದೀನಿ. ಹೃದಯವು ನಿನ್ನ ಹೆಸರನ್ನು ಸದಾ ಜಪಿಸುತ್ತೆ, ಅಂತೆಲ್ಲಾ. ಈಗ ಎಲ್ಲಿ ಹೋಯ್ತು ಈ ಮಾತು?’

‘ನಿನಗೆಲ್ಲೋ ಭ್ರಮೆ. ಯಾರಾದರೂ ಪರೀಕ್ಷೆ ಮುಗಿದ ಮೇಲೆ ಪುನಃ ಪುಸ್ತಕ ಓದ್ತಾರಾ?’

‘ಪುಸ್ತಕ ಓದೋಲ್ಲ, ಆದರೆ ಟೆಲಿಫೋನ್ ಸಂಖ್ಯೆ ತಿಳಿದುಕೊಂಡಿರಬಹುದಲ್ವಾ?’

ಟೆಲಿಫೋನು? ಯಾರದ್ದು?’

‘ಓಹೋ, ಯಾರದ್ದು. ಎಷ್ಟು ಜನರ ನಂಬರು ಗೊತ್ತಪ್ಪಾ ನಿಮಗೆ? ಕಮಲ, ವಿಮಲ, ರೀಟಾ, ಜೇನಿ, ನಿಮ್ಮ ಪಟ್ಟಿ ಇಷ್ಟೇಯೋ, ಇನ್ನೂ ಇದೆಯೋ?’

‘ಯಾರೇ ಅವರೆಲ್ಲಾ? ನಾನು ಅವರ ಹೆಸರು ಕೇಳೇ ಇಲ್ಲ.’

‘ಕಮಲ ಎಂದರೆ ಮೇಲಿನ ಅಪಾರ್ಟ್‌ಮೆಂಟಿನವಳು, ಗಂಡನ್ನ ಬಿಟ್ಟವಳು, ವಿಮಲ ಇರೋದು ಕೆಳಗಿನ ಅಪಾರ್ಟ್‌ಮೆಂಟಿನಲ್ಲಿ, ಅವಳ ಗಂಡ ಸದಾ ನೈಟ್‌ಶಿಫ್ಟ್ ಕೆಲಸ ಮಾಡ್ತಾನೆ. ರೀಟಾ ಎಂದರೆ  ಸರಿ, ಸರಿ, ನಾನು ಇದನ್ನೆಲ್ಲಾ ನಿಮಗೆ ಯಾಕೆ ಹೇಳಬೇಕು?’

‘ಅದೂ ಸರಿಯೇ ಅನ್ನು. ಬೇರೆಯವರ ವಿಷಯ ಆಡಿ ಬಾಯಿ ನೋಯಿಸಿಕೊಳ್ಳಬಾರದು. ಮಾಡಿದವರ ಪಾಪ ಆಡಿದವರ ಅಕೌಂಟಿಗೆ ಎಂದ ಗಾದೆಯೇ ಇಲ್ಲವೇ?’

‘ಮತ್ತೆ ಹಾಯ್ ಅಂದವರ ಪಾಪ?’

‘ಹಾಯ್ ಅಂದರೆ ತಪ್ಪೇನೇ? ಸಾರಿ, ಇನ್ನು ಹಾಗನ್ನೋಲ್ಲ. ಇಲ್ಲಿಗೆ ಈ ಮಾತುಕತೆಗೆ ಮುಕ್ತಾಯ ಹಾಕೋಣವೇ?’

‘ಅದು ಹೇಗೆ ಆಗುತ್ತೆ? ಸಂಜೆಗೆ ಅಡುಗೆ ಮಾಡಲು ಮನಸ್ಸಿಲ್ಲ. ಮನಸ್ಸು ಹಾಳಾದಾಗ ನೀವು ಅಂದ ಮಾತುಗಳಿಗೆಲ್ಲಾ ರೆಕ್ಕೆ–ಪುಕ್ಕ ಬರುತ್ತೆ, ಬಾಯಿ ಏನೇನೋ ಆಡುತ್ತೆ.’

‘ತಿಳೀತು ಬಿಡು, ರಾತ್ರಿಯ ಊಟ ಹೋಟೆಲಿನಲ್ಲಿ ಅಂತ.’

■

# ಆಧುನಿಕ ರಕ್ಕಸರು

● ಗುಂಡುರಾವ್ ದೇಸಾಯಿ

ಮಕ್ಕಳು ಹೀಗೇಕೆ ಹೊಸ ಬಗೆಯ ಉತ್ಪನ್ನಗಳ ಮೊರೆ ಹೋಗುತ್ತಿವೆ. ಪಿಜ್ಜಾ, ಬರ್ಗರ್, ಕುರುಕುರೆ, ಗೋಬಿ, ನೂಡಲ್ಸ್, ಚಾಟ್ಸ್, ಚಾಕಲೇಟ್ ಮೊದಲಾದ ಜಂಕ್‌ಫುಡ್‌ಗಳು, ಬೇಕರಿ ಐಟಮ್ಸ್‌ಗಳು ದೊಡ್ಡವರಾದಿಯಾಗಿ ಸೂರೆಗೊಳ್ಳುತ್ತಿದ್ದಾರೆ. ಟಿ.ವಿ, ಮೊಬೈಲ್, ಇಂಟರ್ ನೆಟ್ ದಾಸರಾಗುತ್ತಿದ್ದಾರೆ. ಬುದ್ಧಿಯನ್ನು ಕಳೆದುಕೊಳ್ಳುತ್ತಿದ್ದಾರೆ ಇದಕ್ಕೆ ಕಾರಣ ಏನು ಅಂತ ಡಿ.ಎನ್.ಎ ಸ್ಪೇಷಲಿಸ್ಟ್ ಪದ್ದು ದೀರ್ಘ ಸಂಶೋಧನೆಯಲ್ಲಿ ತೊಡಗಿದ. ಎಂತೆಂತಹದೋ ವ್ಯಾಧಿಗಳಿಗೆ ಔಷಧಿ ಕಂಡುಹಿಡಿದಿದ್ದ ಪದ್ದು ಜಂಕ್ ಫುಡ್‌ನ ಸಹವಾಸದಿಂದ ಡಿಎನ್‌ಎ ರಚನಾ ಕ್ರಮವೆ ಬದಲಾವಣೆಯಾಗುತ್ತಿರುವುದನ್ನು ಗಮನಿಸಿ ಅಚ್ಚರಿಗೊಂಡ. ಅಲ್ಲಿ ವಂಶವಾಹಿನಿಯಲ್ಲದ ಹೊಸಬಗೆ ವರ್ಣ ತಂತೂ ಬಂದು ಸೇರುತ್ತಿರುವುದನ್ನು ಕಂಡು ದಂಗಾದ; ತನ್ನ ಸಂಶೋಧಕ ಮಿತ್ರರಿಗೆಲ್ಲ ಹಂಚಿಕೊಂಡ. ಪದ್ದು ವೈಚಾರಿಕ ಚಿಂತಕ ಜೊತೆಗೆ ಮನಸ್ಸಿನ ಒತ್ತಡ ದುಗಡವನ್ನು ಕಡಿಮೆ ಮಾಡಿಕೊಳ್ಳಲು ಅಧ್ಯಾತ್ಮದ ಬಗ್ಗೆ ಒಲವಿದ್ದ ವಿಜ್ಞಾನಿ. ಸಮಸ್ಯೆಗೆ ಕಾರಣ ಹುಡುಕುತ್ತಾ ಮಲಗಿದಾಗ ತಕ್ಷಣ ದೇವರು ಪ್ರತ್ಯಕ್ಷನಾದ. "ಯಾರು?" ಎಂದು ಎದ್ದು ಲೈಟ್ ಹಾಕಿದ.

"ನಾನು... ನಾರಾಯಣ... ಲೋಕಪಾಲಕ"

ಹೌಹಾರಿದ ಪದ್ದು "ನಿಜಾನಾ! ಈ ವಿಜ್ಞಾನ ಯುಗದಲ್ಲಿ ನಂಬಬಹುದೆ? ಅದೂ ವಿಜ್ಞಾನಿಯಾಗಿ"

"ನೀನು ಸಂಸ್ಕಾರ ಪುರುಷ, ಹಾಗಾಗಿ ದರ್ಶನ ನೀಡಿರುವೆ. ವಿಜ್ಞಾನ ಒಂದು ಜ್ಞಾನದ ಶಾಖೆಯ ಹೊರತೇ ಪ್ರಕೃತಿಗೆ ಮೀರಿದ್ದಲ್ಲ. ಪ್ರಕೃತಿಯ ರಹಸ್ಯ ನಮ್ಮಲ್ಲಿ ಅಡಗಿದೆ. ನಿಮಗೆ ತಿಳಿಯಲು ಸಾಧ್ಯವಿಲ್ಲ"

"ಬಿಗ್ ಬ್ಯಾಂಗ್ ಪ್ರಯೋಗ ನಡೆದಿದೆ ನಿಮ್ಮ ರಹಸ್ಯ ತಿಳಿಯುತ್ತದೆ"

"ಇಲ್ಲ ವತ್ಸ ಅದು ಅಷ್ಟು ಸುಲಭ ಅಲ್ಲ, ಪ್ರಕೃತಿಯ ವಿರುದ್ಧ ಈಜಿದಷ್ಟು ನಿಮಗೆ ತೊಂದರೆ. ಈಗ ನೋಡುತ್ತಿರುವಿರಿ ತಾಪಮಾನದ ಏರಿಕೆ ಅದರಿಂದಾಗುತ್ತಿರುವ ಅನಾಹುತವನ್ನ"

"ನಿಜ ಆದರೂ ಅದರ ಬಗ್ಗೆ ಮಾತು ಬೇಡ. ಯಾವುದೊ ವಿಷಯದ ಬಗ್ಗೆ ಚಿಂತಿಸುವಂತಿತ್ತು. ಅದಕ್ಕಾಗಿ ಬಂದೆ"

" ತಮಗೆ ಗೊತ್ತಾ......"

" ಅಣುರೇಣು ತೃಣಕಾಷ್ಟಗಳಲ್ಲೂ ನಾನಿರುವೆ ಅಂದಮೇಲೆ ಗೊತ್ತಾಗದೆ ಇರುತ್ತದೆಯೆ?"

"ಮಕ್ಕಳು ದೊಡ್ಡವರಾದಿಯಾಗಿ ಹೊಸ ಚಟಗಳ ದಾಸರಾಗಿ ಅವರ ಡಿ.ಎನ್.ಎ ರಚನೆಯಲ್ಲಿ ಏರುಪೇರಾಗುತ್ತಿದೆ.. ಹೊಸ ಜಾಲವೊಂದು ರೂಪಗೊಳ್ಳುತ್ತಿದೆ. ಇದುವರೆಗಿನ ವೈದ್ಯಕೀಯ ವಿಜ್ಞಾನದಲ್ಲಿ ಇದು ಘಟಿಸಿರಲಿಲ್ಲ. ಇದು ನನಗೆ ಅಪಾರವಾಗಿ ಕಾಡುತ್ತಿದೆ"

ನಾರಾಯಣ ಎಲ್ಲವನ್ನೂ ಅವಲೋಕಿಸಿ "ಇದು ಅಸುರರ ತಂತ್ರ" ಎಂದ

“ವಾಟ್? ರಾಕ್ಷಸರೆ. ಯಾವ ಕಾಲದಾಗ ಇದ್ದೀರಿ ನಾರಾಯಣ!”

“ವೇಟ್ ವತ್ಸ, ದೊಡ್ಡವರಾದಿಯಾಗಿ ಮಕ್ಕಳು ಇಂತಹ ಚಟಗಳಿಗೆ ದಾಸರಾಗುತ್ತಿರುವುದು ಅಸುರರ ತಂತ್ರವೆ. ದಶಕಗಳ ಹಿಂದೆ ತಪಸ್ಸು ಮಾಡಿದ ಅಸುರರು ಮಾನವ ಕುಲ ಸಮೂಹ ದೇವತೆಗಳಿಗಿಂತಲೂ ಬಲಿಷ್ಠವಾಗುತ್ತಿದೆ. ಅವರ ಆಧುನಿಕ ಶಸ್ತ್ರಾಸ್ತ್ರಗಳ ಎದುರು ಹೋರಾಡುವ ಶಕ್ತಿ ನಮಗೆ ಇಲ್ಲ. ಒಂದೆ ಹೊಡೆತದಲ್ಲಿ ನಮ್ಮನ್ನು ಸಂಹರಿಸುತ್ತಾರೆ ಅವರಲ್ಲಿ ಅಂತಹ ಕ್ಷಿಪಣಿಗಳಿವೆ. ರಾಕ್ಷಸರಾಗಿ ನಾನು ನಮ್ಮ ಅವತಾರ ಮಾಡಬೇಕಿದೆ. ಮನುಷ್ಯರಿಗಿಂತ ನೀವೆ ವಾಸಿ. ಹಲವು ವರ್ಷಗಳ ಕಾಲ ಬದುಕಿಸಿ ಕೊಲ್ಲುತ್ತಿದ್ರಿ. ಈಗೇನಾದರೂ ನಾವು ಹೋದರೆ ಒಂದೆ ಕ್ಷಣದಲ್ಲಿ ಸಂಹರಿಸುತ್ತಾರೆ. ಹಾಗಾಗಿ ಬೇರೆ ಮಾರ್ಗ ತೋರಿಸಿ” ಅಂದ್ರು

“ನಾನು, ನೀವೆ ಕೇಳಿ” ಎಂದೆ

“ಅವರು ಭೂಜನರು ತಿನ್ನುವ, ನೋಡುವ, ಉಪಯೋಗಿಸುವ ವಸ್ತುಗಳಲ್ಲಿ ನಾನು ಹೊಕ್ಕು ಅವರಿಗೆ ತೊಂದರೆ ಕೊಡುತ್ತೇವೆ. ದಾಸರನ್ನಾಗಿ ಮಾಡುತ್ತೇವೆ. ಮನುಕುಲದ ವಿನಾಶ ಮಾಡುತ್ತೇವೆ. ಉತ್ಪಾದಕರ ಮನಹೊಕ್ಕು ಇಂತಹ ಸೃಷ್ಟಿಗಳನ್ನು ಮಾಡಲಿಕ್ಕೆ ಪ್ರಚೋದಿಸುತ್ತೇವೆ, ಮನುಷ್ಯರನ್ನು ದೃಷ್ಟಿ ಹಾಗೂ ನಾಲಿಗೆಯಿಂದಲೆ ಮಾತ್ರ ಸೋಲಿಸಲು ಸಾಧ್ಯ. ಮೆದುಳಿನಿಂದ ಅಲ್ಲ ಎಂದ್ರು. ನಾನು ಅಸ್ತು ಎಂದೆ”

“ಅಯ್ಯೊ! ಎಂತಹ ಕೆಲಸ ಮಾಡಿದಿರಿ. ಇದು ನಿಜವೆ! ನಂಬಬಹುದೆ?”

ನಾರಾಯಣ ಗೋಡೆಯ ಮೇಲೆ ಸ್ಕ್ರೀನ್ ಮೂಡಿಸಿ ಅವನು ಯೋಚಿಸುತ್ತಿದ್ದ ಡಿ.ಎನ್.ಎ.ನ ಆ ವರ್ಣತಂತುವಿನ ಸ್ವರೂಪವನ್ನು ಪರದೆ ಮೇಲೆ ಮೂಡಿಸಿ ಅದರ ಒಳಹೊಕ್ಕು ಆ ತಂತುವಿನ ವಿಶ್ವರೂಪ ತೋರಿಸಿದ

“ಅಮ್ಮಾ...!ವಾಟ್ ಎ ವಂಡರ್. ದೇವರೆ ನಿನಗೂ ವಿಜ್ಞಾನ ಗೊತ್ತಾ?”

“ನಾನೇ ನಡೆಸುತ್ತಿರುವವ ನಾಟಕ ವತ್ಸ. ನೀವೆಲ್ಲಾ ಪಾತ್ರಧಾರಿಗಳು. ಏನೇ ಮುಂದುವರೆದರೂ ಜನನ ಮರಣ ನನ್ನ ಕೈಯಲ್ಲಿ. ನಿಗೂಢ ಸೌರಮಂಡಲದ ಚಲನೆ ನನ್ನ ಕೈಯಲ್ಲಿ”

“ಸತ್ಯ..... ನಾರಾಯಣ ಆದರೆ ಆ ರಾಕ್ಷಸರನ್ನು ಕೊಲ್ಲೊದು ಹೇಗೆ?”

“ಪ್ರತಿಯೊಬ್ಬರ ಮನೆಮನಗಳಲ್ಲೂ ನೆಲೆಸಿದ್ದಾರೆ. ಮನುಷ್ಯ ಜನಾಂಗವೇ ನಾಶವಾಗಬೇಕಾಗುತ್ತದೆ”

“ನಾರಾಯಣ ಇದು ಅನ್ಯಾಯ ಇಂತಹ ವರವನ್ನೇಕೆ ಇತ್ತೆ”

“ಬೇಡಿದವರಿಗೆ ಇಲ್ಲ ಎನ್ನದವನು ನಾನು”

“ನಾನು ಬೇಡಿಕೊಳ್ಳುವೆ, ಇದಕ್ಕೆ ಪರಿಹಾರವೇನು”

“ದೈವತ್ವದ ಬಗ್ಗೆ ನಂಬಿಕೆ ಇದೆಯಾ?”

“ಸಂಕಟ ಬಂದಾಗ ವೆಂಕಟರಮಣ. ಸಮಸ್ಯೆ ಬಂದಿದೆ, ನಂಬುವೆ, ಹೇಳು”

“ಅದಕ್ಕಾಗಿ ಬಂದಿರುವೆನು. ನಿನ್ನ ಸಂಶೋಧನಾ ಸಮಯದಲ್ಲಿ ಎಲ್ಲವನ್ನೂ ಮಾಡಿ ಹೊಳೆಯದಿದ್ದಾಗ ‘ಓ ಗಾಡ್......’ ಅಂತಿದ್ದೆ. ನೀನು ವೈಚಾರಿಕನಾದರೂ ನನ್ನಲ್ಲಿ ಸ್ವಲ್ಪ ನಂಬಿಕೆ ಇಟ್ಟುದ್ದುದ್ದಕ್ಕಾಗಿಯೆ ನಿನ್ನಲ್ಲಿಗೆ ಬರಬೇಕಾಯಿತು”

"ಥ್ಯಾಂಕ್ಸ್ ಗಾಡ್, ಹೇಳಿ ಪರಿಹಾರ"

"ತಿನ್ನುವ ಆಹಾರ, ನೋಡುವ ನೋಟ, ಉಪಯೋಗಿಸುವ ಇಂಟರ್ ನೆಟ್‌ನಿಂದ ನಿಧಾನವಾಗಿ ಅವರಲ್ಲಿ ಅಸುರರು ಪ್ರವೇಶ ಮಾಡಿದ್ದಾರೆ. ಅದರಿಂದಾಗಿ ಮನುಷ್ಯರ ಆಯುಷ್ಯ ಕ್ಷೀಣಿಸುತ್ತಿದೆ. ಮನಸ್ಸು ವಿಚಿತ್ರ ತೊಳಲಾಟದಲ್ಲಿ ನಲುಗುತ್ತಿದೆ. ಅವರು ವರ ಪಡೆದಂತೆ ನನ್ನ ಯೋಜನೆಗಿಂತ ವಿಭಿನ್ನವಾಗಿ ನಿಮಗೆ ಕಾಡುತ್ತಿದ್ದಾರೆ. ನನಗೆ ಇದು ಆಶ್ಚರ್ಯ ತಂದಿದೆ. ವರ ಕೊಟ್ಟಾಗಿದೆ. ಅನುಭವಿಸಬೇಕು"

"ಅಲ್ಲ ನಾರಾಯಣ ಪರಿಹಾರದ ಬಗ್ಗೆ ತಿಳಿಸಿ"

"ಅವರನ್ನು ಕೊಲ್ಲುವುದು ಅಷ್ಟು ಸುಲಭವಲ್ಲ. ನಿಮ್ಮನ್ನು ಮೊದಲು ಮಾಡಿ ಎಲ್ಲರಲ್ಲೂ ಆವರಿಸಿದ್ದಾರೆ. ಇಷ್ಟು ಯುಗಗಳಲ್ಲೂ ನೇರವಾಗಿ ಎದುರಿಸಿದ್ದ ಇವರು ಇಂತಹ ಪ್ಲಾನ್ ಮಾಡಿ ವರ ಪಡೆದದ್ದು ನನ್ನನ್ನೆ ಬೆರಗು ಮೂಡಿಸಿದೆ. ಅವರಿಗೆ ಗೊತ್ತು ಕಲಿಯುಗದಲ್ಲಿ ಜನ ದೇವರನ್ನು ನಂಬಲ್ಲ. ತಪಸ್ಸು ಮಾಡಲ್ಲ. ಯಾರೂ ಇದರ ಪರಿಹಾರದ ಬಗ್ಗೆ ಯೋಚಿಸೋಲ್ಲ. ಇಲ್ಲಿವರೆಗೂ ಅವುಗಳೆಲ್ಲವನ್ನು ಅನುಭವಿಸುತ್ತಾ ಇರುತ್ತೇವೆ. ವಿಶಿಷ್ಟ ಸಂತೋಷ ಅನುಭವಿಸುತ್ತಿರುವಿರಿ ಹೊರತು ಪರಿಹಾರಕ್ಕಾಗಿ ಚಿಂತಿಸಿಲ್ಲ.

"ಹೌದು ನಾರಾಯಣ ಇದಕ್ಕೆ ಪರಿಹಾರವೇನು?"

"ಕಾಲ ಮೀರಿದೆ. ದೇವರನ್ನು ತೃಣವೆಂದು ಭಾವಿಸಿದ ನೀವುಗಳೆಲ್ಲ ಅನುಭವಿಸಲೇಬೇಕು"

"ಹಾಗೇಕೆ ಅಂತಿರಿ ನಿತ್ಯ ಸಾವಿರಾರು ಮಂದಿರಗಳು ಏಳುತ್ತಿವೆ?"

"ನನ್ನನ್ನು ಮಾರುಕಟ್ಟೆ ವಸ್ತುವಾಗಿ ಮಾಡಿಕೊಂಡಾಗ ಭಕ್ತಿ ಎಲ್ಲಿಯದು? ಭಕ್ತರಿಂದ ಸ್ವಾಮಿಗಳವರೆಗೆ ಎಲ್ಲರೂ ವ್ಯವಹಾರಿಕರೆ"

"ಆಯ್ತು ನಾರಾಯಣ ಈ ಸಮಸ್ಯೆಗೆ ಪರಿಹಾರವನ್ನಾದರೂ ನೀಡು"

"ಅದು ನಿಮ್ಮಿಂದ ಸಾಧ್ಯವಿಲ್ಲ. ಅವರು ಬಲಿಷ್ಟರಾಗಿದ್ದಾರೆ. ಹಲವು ವ್ಯಾಧಿಗಳಿಗೆ ಕಾರಣರಾಗುತ್ತಿದ್ದಾರೆ"

"ಹೇಳಿ ನಾರಾಯಣ ಜನರಲ್ಲಿ ಜಾಗೃತಿಯನ್ನಾದರೂ ಮೂಡಿಸುವೆ"

"ಮನೋನಿಗ್ರಹ, ಉತ್ತಮ ಹವ್ಯಾಸ, ದೈಹಿಕ ವ್ಯಾಯಾಮ ಒಂದೆ ಇದಕ್ಕೆ ಪರಿಹಾರ. ಯಾರು ಮನಸ್ಸನ್ನು ನಿಗ್ರಹಿಸಿ ಟಿ.ವಿ, ಮೊಬೈಲ್ ಇಂಟರ್ ನೆಟ್‌ನಿಂದ ದೂರ. ಹೊಸ ಆಹಾರ ಪದ್ದತಿ, ಜಂಕ್ ಫುಡ್ ತಿನ್ನುವಿಕೆಯಿಂದ ದೂರ ಉಳಿತಾರೋ ಅವರು ಆ ರಾಕ್ಷಸರಿಂದ ದೂರವಾಗುತ್ತಾರೆ, ಬಹುಕಾಲ ಬಾಳ್ತಾರೆ" ಎಂದು ಅದೃಶ್ಯನಾದ.

"ಅಯ್ಯೊ ನಾರಾಯಣ......." ಎಂದು ಪದ್ದು.

ಮಗಳು "ಅಪ್ಪಾ ಈ ಕುರುಕುರೆ ಎಷ್ಟು ಟೇಸ್ಟಿದೆ. ನೋಡು ?"ಎಂದು ಬಾಯಲ್ಲಿಡಲು ಬಂದು 'ಸಂಜೆ ಪಿಜ್ಜಾ ಬೇಕು' ಎಂದು ಬಯಕೆ ಇಟ್ಟಳು. ಮಗ ಮೊಬೈಲನಲ್ಲಿ ಮುಳುಗಿದ್ದ. ಅಮ್ಮ ಟಿ.ವಿ ನೋಡುವುದರಲ್ಲಿ ಲೀನಳಾಗಿದ್ದಳು. ಹೆಂಡತಿ ನೆಟ್ ಪ್ಯಾಕ ಖಾಲಿಯಾಗಿದ, ಹಾಕಿಸಿ ಇವತ್ತು ಎಂದ್ಲು. ಪದ್ದು ನಾರಾಯಣನ ಮಾತು ಸ್ಮರಿಸಿಕೊಂಡು ಹಾಗೆ ಕುಸಿದ. ■

# ಎಸ್‌ಕೇಸೀ ಅಂದ್ರೆ ಸ್ವೀಟೂ ಖಾರಾ ಕಾಫಿ

● ಶ್ರೀಧರ ಬಾಣಾವರ

ಇತ್ತೀಚೆಗೆ ಚೆನ್ನೈನಲ್ಲಿ ಎಸ್ ಕೇ ಸೀ ಹೆಸರಿನ ಒಂದು ಆನ್ ಲೈನ್ ತಿಂಡಿಮಳಿಗೆಯು ಫೇಸ್ ಬುಕ್ ಅವತಾರದಲ್ಲಿ ಕಾಣಿಸಿಕೊಂಡಿತು. ಸಾಂಪ್ರದಾಯಿಕ ತಮಿಳು ಸಿಹಿ, ಖಾರದ ತಿಂಡಿಗಳನ್ನು ಆನ್ ಲೈನ್ ಮೂಲಕ ಮಾರುವ ಮಳಿಗೆ ಇದು. ತಮಿಳರ ಮೆಚ್ಚಿನ ಕಾಫಿಪುಡಿ ಸಹಾ ಇಲ್ಲಿಯ ಹಾಟ್ ಐಟಮ್.

ಇದರ ಶಿರೋನಾಮೆ ಹಾಗೂ ವಿವರಗಳನ್ನು ನೋಡುತ್ತಿದ್ದಂತೆ ಈ ಹಿಂದೆ ಜನಪ್ರಿಯವಾಗಿ ಪ್ರಚಲಿತವಿದ್ದ ಆದರೆ ಈಗ ಅದರ ಪ್ರಾಮುಖ್ಯತೆಯನ್ನು ಹೆಚ್ಚೂ ಕಡಿಮೆ ಕಳೆದು ಕೊಂಡಿರುವ ಎಸ್ ಕೇ ಸೀ ಪಾರ್ಟಿಗಳ ಕಡೆಗೆ ನನ್ನ ಗಮನ ಹರಿಯಿತು. ಸ್ವಲ್ಪ ಹಳೆಯ ಕಾಲದವರಾದರೆ ನೀವೂ ನೆನಪಿಸಿಕೊಳ್ಳಿ. ನೀವೋ ನಿಮ್ಮ ಕುಟುಂಬದ ಸದಸ್ಯರು ಯಾರೋ ಏನಾದರೂ ಸಣ್ಣದೋ ದೊಡ್ಡದೋ ಸಾಧನೆ ಮಾಡಿರುವುದು ನಿಮ್ಮ ಕಚೇರಿಯವರ ಅಥವಾ ಸ್ನೇಹಿತರ ಕಿವಿಗೆ ಬಿದ್ದ ಕೂಡಲೇ ಹುಟ್ಟುತ್ತಿದ್ದ ಮೊದಲ ಹಕ್ಕೊತ್ತಾಯವೇ ಎಸ್ ಕೇ ಸೀ ಪಾರ್ಟಿ. ಇದನ್ನು ಕ್ರಮಬದ್ಧವಾಗಿ ಮುಂದೆ ತೆಗೆದುಕೊಂಡು ಹೋಗುವ , ಪಾರ್ಟಿಯ ರೂಪುರೇಷೆಗಳನ್ನು ನಿರ್ಧರಿಸಿ ಒತ್ತಾಯಪೂರ್ವಕವಾಗಿ ಪಡೆದುಕೊಳ್ಳಲೆಂದೇ ಇದ್ದ ಪರಿಣಿತರ ತಂಡವೊಂದು ನಮ್ಮೊಳಗೆ ಇದ್ದೇ ಇರುತ್ತಿತ್ತಲ್ಲವೇ? ಈ ಎಸ್ ಕೇ ಸೀ ಪಾರ್ಟಿಗಳು ಶ್ರೇಣೀಕೃತವಾಗಿ ಸಹಾ ಇತ್ತೆಂಬುದು ನಿಮಗೆ ತಿಳೀದೇ ಇದೆ. ಮೈಸೂರಿನಲ್ಲಿ ಈ ಎಸ್ ಕೇ ಸೀ ಪರ್ವದಲ್ಲಿ ಹೆಚ್ಚುಕಾಲ ಕಳೆದಿದ್ದ ನನಗೆ ಪ್ರಥಮ ದರ್ಜೆಯ ಪಾರ್ಟಿಯ ಪರಿಚಯವಿತ್ತು. ಸಯ್ಯಾಜೀ ರಾವ್ ರಸ್ತೆಯ ಪ್ರಖ್ಯಾತ ಇಂದ್ರಭವನದಲ್ಲಿನ ಸ್ಪೆಷಲ್ ರೂಮಿನಲ್ಲಿ ಡಬಲ್ ಗುಲಾಬ್ ಜಾಮೂನ್, ಬೆಣ್ಣೆ ಮಸಾಲೆ, ಸ್ಪೆಷಲ್ ಕಾಫಿ ನಂತರ ಹೊರಗಿನ ಬೀಡಾ ಸ್ಟಾಲ್ ನಲ್ಲಿ ಈಗ ಇತಿಹಾಸ ಸೇರಿರುವ ನಂಜನಗೂಡು ರಸಬಾಳೆ, ಎಕ್ಸ್ಟ್ರಾ ಸ್ಪೆಷಲ್ ಬೀಡಾ, ಧೂಮ್ರಪಾನಿಗಳಿಗೆ ವಿದೇಶಿ ಸಿಗರೇಟು, ಇದು ಪ್ರಥಮ ದರ್ಜೆ ಪಾರ್ಟಿಯ ಪೂರ್ವ ನಿರ್ಧಾರಿತ ಫಾರ್ಮೆಟ್. ಇದನ್ನು ಕೊಡಿಸುವ ಸಾಮರ್ಥ್ಯ ಹಲವರಿಗಷ್ಟೇ ಇತ್ತೆಂಬುದನ್ನು ಹೇಳಬೇಕಾಗಿಲ್ಲ. ಈ ಪಾರ್ಟಿಯ ಫಲಾನುಭವಿಗಳನ್ನು ಎಣಿಸಲು ಕೈಬೆರಳುಗಳೇ ಸಾಕು, ಏಕೆಂದರೆ ಅವರು ತೀರಾ ಖಾಸಗೀ ವಲಯದ ಸ್ನೇಹಿತರಾಗಿರಬೇಕು. ಇಂತಹುದೇ ಅವಕಾಶ ಒದಗಿದಾಗ ಅವರೂ ಇದೇ ಫಾರ್ಮೆಟ್ಟಿನ ಪಾರ್ಟಿ ಕೊಡಿಸಲು ಶಕ್ತರಾಗಿದ್ದರೆ ಸಾಕು.

ಇವರಿಗಷ್ಟೇ ಕೊಡಿಸಿದರೆ ಉಳಿದವರು ಸುಮ್ಮನಿದ್ದಾರೆಯೇ? ಇಂದ್ರ/ಚಂದ್ರ ಭವನದ ಪಾರ್ಟಿಮಾಡಲು ನಿಮಗೆ ಸಾಲ ಸಿಕ್ಕಿಲ್ಲದಾಗ ಕಚೇರಿಗಳಲ್ಲಿ , ನೀವು ಕೆಲಸ ಮಾಡುವ ಸ್ಥಳಗಳಲ್ಲಿ ಮಧ್ಯಾನ್ಹಗಳಲ್ಲಿ ಇದಕ್ಕೆ

ಬೇರೆಯದೇ ವ್ಯವಸ್ಥೆಯಾಗುತ್ತಿದ್ದುದು ನಿಮಗೆ ಗೊತ್ತೇ ಇದೆ. ನೀವು ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ಪಾರ್ಟಿಗಳನ್ನು ಕೊಟ್ಟಿದ್ದೀರಿ, ತೆಗೆದು ಕೊಂಡಿದ್ದೀರಿ. ಮನೆಯಲ್ಲಿ ಮಡದಿಯೋ ಅತ್ತೆಯೋ ಮಾಡಿಕೊಟ್ಟ ಮೈಸೂರು ಪಾಕು ಅಥವಾ ಕೊಬ್ರಿಮಿಠಾಯಿ, ಹತ್ತಿರದ ಬೇಕರಿ/ಹೋಟೆಲ್ ನ ಖಾರಾ ಸೇವ್ (ಮಿಕ್ಸಚರ್)ಗಳನ್ನು ಡಬ್ಬಗಳಲ್ಲಿ ತಂದು , ಆಫೀಸಿನ ಆಸ್ತಿಯಾದ ಚೌಕಾಕಾರದ ಕಾಗದದ ತುಂಡುಗಳನ್ನು ಜೊತೆಯಲ್ಲಿಟ್ಟುಕೊಂಡು ಪ್ರತಿಯೊಬ್ಬರ ಸೀಟಿಗೂ ನೀವೇ ಖುದ್ದಾಗಿ ಹೋಗಿ ಅವರ ಟೇಬಲ್ಲಿನ ಮೇಲೆ ನೀಟಾಗಿ ಕಾಗದದ ಚೂರನ್ನು ಹರಡಿ ಒಂದು ಸಣ್ಣಾತಿಸಣ್ಣ ಚೂರು ಎಸ್, ಮೂರು ಬೆರಳುಗಳಲ್ಲೋ ಇಲ್ಲ ಮಕ್ಕಳು ಊಟಮಾಡುವ ಪ್ಲಾಸ್ಟಿಕ್ ಚಮಚದಲ್ಲೋ ಸ್ವಲ್ಪ ಕೇ ಉದುರಿಸಿ ನಂತರ ದಿನವೂ ಕಚೇರಿಗೆ ಕಾಪಿ ತಂದು ಕೊಡುವ ಹುಡುಗನ ಮೂಲಕ ಮೂರುದ್ಧರಣೆ ಸಿ ನೀಡಿ ನಿಮ್ಮ ಜವಾಬ್ದಾರಿ ಕಳೆದುಕೊಂಡದ್ದು ನೀವು ಮರೆತಿರಲಾರಿರಿ. ಈ ರೀತಿಯ ಪಾರ್ಟಿಗಳನ್ನು ಒಪ್ಪದೇ ತೀವ್ರವಾಗಿ ವಿರೋಧಿಸಿ ನಿಮ್ಮ ಜಿಪುಣತನಕ್ಕೆ ಪೂರ್ಣಾಂಕ ದಯಪಾಲಿಸಿ ತಿಂಗಳುಗಟ್ಟಲೆ ಆಡಿಕೊಂಡು ಕಾಲ ಕಳೆದ ಹಿತಶತ್ರುಗಳು ಸಾಕಷ್ಟು ಸಂಖ್ಯೆಯಲ್ಲಿದ್ದುದೂ ಅಷ್ಟೇ ಸತ್ಯ. ಇಂತಹವರ ಬಾಯಿ ಮುಚ್ಚಿಸಲು ಇವರಿಗಾಗಿ ಇನ್ನೊಂದು ಪರ್ಯಾಯ ಪಾರ್ಟಿ ಕೂಡ ಏರ್ಪಡಿಸುವ ಸಂದರ್ಭಗಳು ನಿಮಗೊದಗಿ ಬಂದಿದ್ದೂ ಉಂಟು. ಇಂತಹವರನ್ನು ಸಮೀಪದ ಭಟ್ರ ಹೋಟೆಲ್ಲಿಗೆ ಸಂಜೆ ಕರೆದುಕೊಂಡು ಹೋದ್ರೂ ನಡೆಯುತ್ತದೆಂಬ ಒಡಂಬಡಿಕೆ ಇರುವುದಂತೂ ಸರಿಯೇ. ಭಟ್ರ ಹೋಟೆಲಲ್ಲಿ ಒಡೆದ ಗಾಜಿನ ಬೀರುವಿನಲ್ಲಿ ವಾರದ ಮೊದಲದಿನ ಮಾಡಿದ , ಇರುವೆ ನೊಣಗಳಿಂದ ಅಲಂಕೃತವಾದ ಮೈಸೂರು ಪಾಕಿನ ಸೇವೆ, ಖಾರಕ್ಕೆ ಬಂಡವಾಳ ಹಾಕಲು ನೀವು ತಯಾರಿಲ್ಲ. ಸೀದಾ ಎಂಟರಲ್ಲಿ ಹದಿನಾರು – ಅದರಲ್ಲಿ 8–9 ಲೆಸ್ ,– ಮೈಸೂರು ಪಾಕಿನ ಸಿಹಿ ಪರವಾಗಿಲ್ಲ– ಕಾಫಿಗೆ ಆರ್ಡರ್ ಮಾಡ್ತೀರಿ. ಸಿಹಿ ತಿಂದ ಬಾಯಿಗೆ ಕಾಫಿ ರುಚಿಸುತ್ತದೆಯೇ ಭಟ್ರೇ ಒಂಚೂರು ಬಾಯಿ ಖಾರ ಮಾಡ್ರೀ ಅಂತೀರಿ. ಭಟ್ರು ಗೊಣಗುತ್ತಾ ಡಬ್ಬದಲ್ಲಿ ಮುಚ್ಚಿಟ್ಟಿದ್ದ ಕಳೆದ ವಾರದ ಖಾರಾ ಸೇವೆ ಒಂದು ಹಿಡಿ ತಂದು ಎಲ್ಲರಿಗೂ ಪ್ರಸಾದ ರೂಪದಲ್ಲಿ ಹಂಚಿದರೆ ನಿಮ್ಮ ಗೆಳೆಯರು ಅದನ್ನು ಭಕ್ತಿಯಿಂದ ಸ್ವೀಕರಿಸಿದ ನಂತರ – ಕಣ್ಣೊಗ್ತ್ಕೋಳ್ಳಲ್ಲ ಅಷ್ಟೆ – ಕಾಫಿ ಹೀರಿ ನಿಮಗೆ ಧಾರಾಳವಾದ ವಂದನೆಗಳನ್ನು ಅರ್ಪಿಸಿ ಹೋದರೆ ನಿಮ್ಮ ಎರಡನೇ ದರ್ಜೆಯ ಎಸ್ ಕೇ ಸೀ ಪಾರ್ಟಿ ಗ್ರೇಟ್ ಸಕ್ಸಸ್. ಇನ್ನು ಸ್ವಲ್ಪ ಫಲವತ್ತಾದ ಕಚೇರಿಗಳಲ್ಲಿರುವ ಗುಂ–ತುಂ ಗೆಳೆಯರ ಗುಂಪಿನಲ್ಲಿಯ ಎಸ್ ಕೇ ಸೀ ಪಾರ್ಟಿಯೇ ಬೇರೆ. ಎಸ್ ಅಂದ್ರೆ –ಸೆರೆ, ಕೆ ಅಂದ್ರೆ – ಕೋಳಿ, ಸಿ ಅಂದ್ರೆ ಸಿಗರೇಟು ಎಂದು ಇಲ್ಲಿ ಅರ್ಥ. ಈ ಪಾರ್ಟಿಯ ಖದರೇ ಬೇರೆ. ಇದರ ಗ್ರೇಡೇ ಬೇರೆ.

ಇದಿಷ್ಟು ನನ್ನ ಹಳೇ ಮೈಸೂರಿನ ಜ್ಞಾನವಾದರೆ ನಮ್ಮ ರಾಜ್ಯದ

ಶಿರೋಭಾಗದ ಅಂದರೆ ಉತ್ತರ ಕರ್ನಾಟಕದಲ್ಲೂ ಇದರ ರೂಪ ಹೆಚ್ಚೂ ಕಡಿಮೆ ಹೋಲುತ್ತದೆ. ಅಲ್ಲಿ ಕಾಫಿಯ ಬದಲಾಗಿ ಚಹಾ-ಚಾಯ್ ಇರುವುದರಿಂದ ಕೊನೆಯ ಅಕ್ಷರ ಸಿ ಬದಲಿಸಬೇಕಿಲ್ಲ.

ಇದರ ಒಂದಿಲ್ಲೊಂದು ರೂಪ ನಾನು ನೋಡಿದ ಇನ್ನೂ ಹಲವು ಪ್ರದೇಶಗಳಲ್ಲಿಯೂ ಕಂಡುಬಂದಿದೆ. ಮಹಾರಾಷ್ಟ್ರದಲ್ಲಿ ತನ್ನ ವೃತ್ತಿ ಜೀವನವನ್ನೆಲ್ಲಾ ಕಳೆದ ಅಣ್ಣನ್ನ ಕೇಳಿದೆ, ಅಲ್ಲಿಯ ರೂಢಿಯ ಬಗ್ಗೆ. ಸ್ವಲ್ಪ ಬೇರೆಯೇ ಪದ್ಧತಿಯಂತೆ. ಮೇಲೆ ಹೇಳಿದ ಆಫೀಸಿನ ಮೈಸೂರು ಪಾಕು/ ಕೊಬ್ರಿ ಮಿಠಾಯಿಯ ಪರಿವರ್ತಿತ ರೂಪವಂತೆ. ಅಲ್ಲಿ ಫೇಡಾ ಜೊತೆಗೆ ಚೂಡಾ, ಚಾಯ್ (ಮಹಾರಾಷ್ಟ್ರದವ್ರು ಚಾ ಕೊಡುವ ಕಥೆ ಬೇರೇನೆ ಇದೆ– ತುಂಬಾ ದೊಡ್ಡ ಕಥೆ) ರೂಪದಲ್ಲಿ ಸೆಲೆಬ್ರೇಷನ್ ಆಗುತ್ತಂತೆ. ಈಗ ಈ ಪಾರ್ಟಿಗಳಿಲ್ಲಾ ಮರೆಯಾಗಿವೆ. ಇಂದಿನ ಯುವ ಜನಾಂಗಕ್ಕೆ ಮೆಕ್ ಡೊನಾಲ್ಡ್, ಕೆ ಎಫ್ ಸಿ, ಪಿಜ್ಜಾ , ಬರ್ಗರ್ ಪಾರ್ಟಿಗಳು ಪ್ರಿಯವಾಗಿವೆ.

■

---

# ಮನೆಗೆಲಸದವಳ ಮಹತ್ವ

ಫ್ಲಾಟ್‌ನಲ್ಲಿ ಬೆಲ್ ಆಗುತ್ತದೆ. ಒಬ್ಬಳೇ ಇದ್ದ ಮಹಿಳೆ ಬಾಗಿಲು ತೆಗೆಯುತ್ತಾಳೆ.

ಭಿಕ್ಷುಕ: ತಾಯಿ ಏನಾದರು ಕೊಡಿ.

ಹೆಂ; ತೊಗೊ

ಭಿ: ಹೊರಗೆ ಬಂದು ಕೊಡಿ.

ಹೆಂ: ಸರಿ

ಭಿ; ಹ ಹ ಹಾ!.. ನಾನು ರಾವಣ, ಲಂಕಾದ ರಾಜ.

ಹೆಂ: ಹ ಹ ಹಾ.. ನಾನು ಸೀತೆ ಅಲ್ಲ. ಮನಗೆಲಸದವಳು.

ಭಿ: ಹ ಹಾ! ಮಂಡೋದರಿಗೆ ಒಬ್ಬ ಕೆಲಸದವಳು ಬೇಕು. ನಿನ್ನನ್ನು ಕಿಡ್ನಾಪ್ ಮಾಡುವೆ.

ಹೆಂ: ಹ ಹಾ ಹಾ! ಸೀತೆಯನ್ನ ಹುಡುಕಿಕೊಂಡು ರಾಮ ಮಾತ್ರ ಬಂದ. ಆದರೆ ನನ್ನನ್ನು ಹುಡುಕಲು ಈ ಅಪಾರ್ಟ್‌ಮೆಂಟಿನವರೆಲ್ಲಾ ಬರುತ್ತಾರೆ.

ರಾವಣ ತಕ್ಷಣ ಕಂಬಿ ಕಿತ್ತ ಅಲ್ಲಿಂದ.

ಮನೆಗೆಲಸದವಳ ಮಹತ್ವ!

● **ದಂನಆ**

✓ ಬೇರೊಬ್ಬರ ಮೋಡದಲ್ಲಿ ಕಾಮನಬಿಲ್ಲು ಆಗಲು ಪ್ರಯತ್ನಿಸಿ.

✓ ಇಟ್ಸ್ ರಿಯಲಿ ರೂಡ್ ಟು ಟಾಕ್ ವೆನ್ ಆ ಅಮ್ ಇಂಟರ್ರಪ್ಟಿಂಗ್.

✓ ಖಾಲಿ ನಿವೇಶನ ಕೊಳ್ಳಲು ಹೋದಾಗ ಪ್ರೇಮವಾದರೆ ಅದು ಲವ್ ಅಟ್ ಫಸ್ಟ್ ಸೈಟ್ ಎನ್ನಬಹುದೆ?

✓ ಅಡುಗೆ ಆರ್ಡರ್ ಮಾಡೋದಿಕ್ಕೂ ಕೈಗುಣ ಚೆನ್ನಾಗಿರಬೇಕು.

✓ ಡಾ ವರ್ಗೀಸ್ ಕುರಿಯನ್: ಹಿ ಗೇವ್ ಅಸ್ ಅವರ್ ಫಂಡಮೆಂಟಲ್ ವೈಟ್.

✓ ಒಳ್ಳೆ ಪತ್ನಿ ತಾನು ತಪ್ಪು ಮಾಡಿದಾಗ ಗಂಡನನ್ನು ಕ್ಷಮಿಸುತ್ತಾಳೆ.

✓ ಗೊ ವೇರ್ ಯು ಆರ್ ಸೆಲೆಬ್ರೇಟೆಡ್, ನಾಟ್ ವೇರ್ ಯು ಆರ್ ಟಾಲರೇಟೆಡ್.

✓ ಬೇರೆಯವರ ತಪ್ಪುಗಳಿಂದ ಪಾಠ ಕಲಿ. ಎಲ್ಲ ತಪ್ಪುಗಳನ್ನೂ ನೀನೇ ಮಾಡುವಷ್ಟು ಆಯಸ್ಸು ನಿನಗೆ ಇಲ್ಲದಿರಬಹುದು.

✓ ವರ್ಕ್ ಈಸ್ ದಿ ಕರ್ಸ್ ಆಫ್ ದಿ ಡ್ರಿಂಕಿಂಗ್ ಕ್ಲಾಸ್.

✓ ವಿವಾಹದ ನಂತರ ಗಂಡ ಹೆಂಡತಿ ಒಂದೇ ನಾಣ್ಯದ ಎರಡು ಮುಖಗಳು. ಒಬ್ಬರನ್ನೊಬ್ಬರು ಎದುರಿಸಲಾಗದಿದ್ದರೂ ಒಟ್ಟಿಗೆ ಇರುತ್ತಾರೆ.

✓ ಎಲ್ಲ ಸಮಸ್ಯೆಗಳೂ ಕೆಂಪು ಸಿಗ್ನಲ್ ಇದ್ದಂತೆ. ಸ್ವಲ್ಪ ಸಮಯ ತಡೆದರೆ ಅದು ಹಸಿರಾಗುತ್ತದೆ.

✓ ನೆವರ್ ಸ್ಟಾಪ್ ಡುಯಿಂಗ್ ಯುವರ್ ಬೆಸ್ಟ್ ಜಸ್ಟ್ ಬಿಕಾಸ್ ಸಮ್ ಒನ್ ಡಸ್ ನಾಟ್ ಗಿವ್ ಯು ಕ್ರೆಡಿಟ್.

✓ ಗ್ರಂಥಾಲಯ ಹೊಸ ಹೊಸ ಯೋಚನೆಗಳನ್ನು ಹುಟ್ಟುಹಾಕುವ ಹೆರಿಗೆ ಕೋಣೆ.

✓ ಶ್ರೇಷ್ಠತೆಯನ್ನೇ ಬಯಸುವ ವಾತಾವರಣಕ್ಕೆ ಹೊಂದಿಕೊಳ್ಳಲು ಅನೇಕರಿಗೆ ಸಾಧ್ಯವಾಗುವುದೇ ಇಲ್ಲ.

✓ ಚಹಾ ಕಾರ್ಖಾನೆಯಲ್ಲಿ ಕಾಫಿ ಬ್ರೇಕ್ ಇರುವುದೆ?

✓ ನಮಗೆ ಕಷ್ಟ ಬಂದದ್ದು ಯಾವಾಗ ಗೊತ್ತೆ? ಗೆಣಸಿಗಾಗಿ ಭೂಮಿ ಅಗೆಯುವ ಬದಲು ಚಿನ್ನಕ್ಕಾಗಿ ಅಗೆಯಲು ಶುರು ಮಾಡಿದಾಗ.

✓ ಗೊರಕೆ ನಿಲ್ಲಿಸಬೇಕೆ? ಇಲ್ಲಿದೆ ಉಪಾಯ. ಮಲಗುವಾಗ ಒಂದು ದಿಂಬನ್ನು ಮೊಣಕಾಲುಗಳ ಮಧ್ಯೆ ಇರಿಸಿಕೊಳ್ಳಿ. ಈಗ 100% ನೊ ಗೊರಕೆ. ಏಕೆಂದರೆ ದಿಂಬಿನಿಂದ ಎಷ್ಟು ತೊಂದರೆ ಎಂದರೆ ನಿಮಗೆ ನಿದ್ದೆಯೇ ಬರದು. ಮತ್ತೆ ಇನ್ನೆಲ್ಲಿ ಗೊರಕೆ?

# ಕಳ್ಳನ ಮೇಲೂ ಕರುಣೆ!

● **ಎಚ್. ಶಾಂತರಾಜ ಐತಾಳ**

ನಮ್ಮೂರಲ್ಲೊಬ್ಬ ಅಜ್ಜಿ ಇದ್ದರು. ಮುಗ್ಧತೆಯ ಪ್ರತಿರೂಪ ಅವರು.ನಿಜವಾಗಿ ಕಾಲು ಕಳೆದುಕೊಂಡು ಭಿಕ್ಷಾಟನೆಗಿಳಿದವರು, ಕಣ್ಣಿದ್ದೂ, ಕಾಣದವರಂತೆ ನಟಿಸಿ, 'ಅಮ್ಮಾ, ತಾಯೀ' ಎನ್ನುತ್ತಾ ಬೇಡುವವರು. ಪರ್ಸ್ ಕಳಕೊಂಡವರು. ಪಲ್ಸ್‌ರೇಟ್ ಕಳಕೊಳ್ಳುತ್ತಿರುವವರು– ಎಲ್ಲರೂ ಇವರ ದೃಷ್ಟಿಯಲ್ಲಿ ಸಮಾನರು. ಎಲ್ಲರ ಮೇಲೂ 'ಅಯ್ಯೋ–ಪಾಪ' ಎನ್ನುವ ಅನುಕಂಪ ಅವರಿಗೆ!

ಬೀಡಿ ಸೇದೋದು ತುಂಬ ಕೆಟ್ಟದ್ದು ಎಂಬ ಬೀಜವನ್ನು ಅಜ್ಜಿಯ ಮನಸ್ಸಲ್ಲಿ ಯಾರೋ ಬಿತ್ತಿದ್ದರು. ಆದರೆ ಮೊಮ್ಮಗ ಗೋಪುವೇ ಬೀಡಿ ಸೇದುತ್ತಾನೆಂಬ ಸುದ್ದಿ ಕಿವಿಗೆ ಬಿದ್ದಾಗ ಅಜ್ಜಿಗೆ ಹೇಗಾಗಬೇಡ! ಸರಿ, ಗೋಪುವನ್ನೇ ಕರೆಸಿ ಕೇಳಿದರು ಅಜ್ಜಿ. 'ಹೌದೇನೋ, ನೀನು ಬೀಡಿ ಸೇದ್ತಿಯಂತ ಎಲ್ಲ ಹೇಳ್ತಾರೆ– ಬೇಡಪ್ಪಾ–ಬೇಡ'– ಎಂದು ಉಪದೇಶವನ್ನೂ ಮಾಡಿದರು. ಅಜ್ಜಿಯ ಸೀಮಿತ ಜ್ಞಾನದ ಪರಿಚಯವಿದ್ದ ಗೋಪು ತಕ್ಷಣ ಹೇಳಿ ಬಿಟ್ಟನಂತೆ–'ಛೆ–ಇಲ್ಲಜ್ಜಿ–ನಾನೆಲ್ಲಿ ಬೀಡಿ ಸೇದ್ತೀನಿ. ಎಲ್ಲೋ ಆಗೊಂದು ಈಗೊಂದು ಸಿಗರೇಟ್ ಹಚ್ತೇನಿ–ಅದೇನು ಮಹಾ! ನಿನಗ್ಯಾರೋ ನನಗಾಗದವರು ಚಾಡಿ ಹೇಳಿರ್ತಾರಜ್ಜಿ–ಅಷ್ಟೆ'–ಅಂತ.

ಅದಕ್ಕೆ ಅಜ್ಜಿ 'ಬೀಡಿ, ಅಲ್ಲತಾನೆ –ಸದ್ಯ– ಹೋಗ್ಲಿ ಬಿಡು!' ಎಂದು ಪರೋಕ್ಷನಾಗಿ ಸಿಗರೇಟಿಗೆ ಅನುಮತಿಯನ್ನು ನೀಡಿಯೇ ಬಿಟ್ಟರಂತೆ!

ಈ ಅಜ್ಜಿಯ ಬಳಿ ಹುಡುಗರೆಲ್ಲ ಆಗಾಗ ಕೇಳ್ತಿರ್ತಾರೆ–'ನಿಮ್ಮ ಹೆಸರೇನಜ್ಜಿ!' ಅಂತ. ಅದಕ್ಕೆ 'ತುಂಗಮ್ಮ' ಅಂತ ಅಷ್ಟೇ ಹೇಳಿ ಅವರು ಸುಮ್ಮನಾಗ್ತಾರೆ. ಆದರೆ ಗಂಡನ ಹೆಸರನ್ನು–ಅವರೀಗ ಕಾಲವಾಗಿ ಹಲವಾರು ವರ್ಷಗಳಾಗಿದ್ದರೂ ಸುತಾರಾಂ ಅವರು ಹೇಳೋದಿಲ್ಲ. ಈ ಕುರಿತಾಗಿ ಅವರ ಬಾಯಿಂದ ಗಂಡನ ಹೆಸರು ಹೇಳಿಸಲಿಕ್ಕೆ ಮೊದಲಿಂದಲೂ ನೆಂಟರಿಷ್ಟರು ಪ್ರಯತ್ನಪಟ್ಟು ಸೋತಿದ್ದರಂತೆ. ಅಂದ ಹಾಗೆ ಅವರ ಕೈ ಹಿಡಿದ ಪತಿರಾಯರ ಹೆಸರು ಗಜವದನ ರಾವ್ ಎಂದಾಗಿತ್ತು.

ಮದುವೆಯಾದ ಹೊಸತರಲ್ಲಿ ಸುಶ್ರಾವ್ಯವಾಗಿ ಭಜನೆಗಳನ್ನು ಹಾಡುತ್ತಿದ್ದ ತುಂಗಮ್ಮಗೆ ಆ ಊರಿನ ಸಮಾರಂಭ ಒಂದರಲ್ಲಿ ಆರಂಭಿಕ ಪ್ರಾರ್ಥನೆ ಮಾಡುವ ಅವಕಾಶ ಒದಗಿ ಬಂದಿತ್ತು. ಚಿಕ್ಕಂದಿನಿಂದಲೇ ಈ ತುಂಗಮ್ಮನಿಗೆ 'ಗಜವದನ ಬೇಡುವೆ–ಗೌರೀತನಯ' ಎಂಬ ಪ್ರಾರ್ಥನೆ ತುಂಬ ಅಚ್ಚು ಮೆಚ್ಚಿನದಾಗಿತ್ತು. ಆದರೆ ಈಗ ಗಜವದನರಾಯರ ಮಡದಿಯಾದ ಮೇಲೆ ಈ ಹಾಡನ್ನು ಹಾಡುವುದನ್ನೇ ಬಿಟ್ಟು ಬಿಟ್ಟಿದ್ದರು ತುಂಗಮ್ಮ. ಆದರೆ ಆವತ್ತು ಸಭೆಯಲ್ಲಿ 'ನೀವೇ ಪ್ರಾರ್ಥನೆ ಹಾಡಬೇಕು' ಎಂಬ ಒತ್ತಾಯ ಬಂದದ್ದರಿಂದ ಆದದ್ದಾಗಲಿ, ಹೇಗೂ ಪತಿರಾಯರು ಹತ್ತಿರವಿಲ್ಲವಲ್ಲ ಎಂದುಕೊಳ್ಳುತ್ತಾ ವೇದಿಕೆ ಹತ್ತಿಯೇ ಬಿಟ್ಟರು ತುಂಗಮ್ಮ. ಇನ್ನೇನು ಮೈಕಿನ ಎದುರು ನಿಂತು, ಕೈ ಮುಗಿದು ಪ್ರಾರ್ಥನೆಯನ್ನೂ ಹಾಡಲುಪಕ್ರಮಿಸಬೇಕು ಎನ್ನುವಷ್ಟರಲ್ಲಿ ಸಭೆಯಲ್ಲಿ ಎರಡನೇ ಸಾಲಿನಲ್ಲಿ ಕುಳಿತು ತನ್ನನ್ನೇ ದಿಟ್ಟಿಸಿ ನೋಡುತ್ತಿರುವಂತೆ ಭಾಸವಾದ ವ್ಯಕ್ತಿ ತುಂಗಮ್ಮನ ಪತಿದೇವರಾದ ಗಜವದನರಾಯರೇ ಆಗಿದ್ದರು. ತುಂಗಮ್ಮನಿಗೆ ಆಕಾಶ ತಲೆ ಮೇಲೆ ಕಳಚಿ ಬಿದ್ದ ಹಾಗೆ ಆಯಿತು. ಆದರೂ ಸಾವರಿಸಿಕೊಂಡು 'ಗಜವದನಾ ಬೇಡುವೆ'–ಎಂಬ

ಹಾಡನ್ನು ಅದೇ ಧಾಟಿಯಲ್ಲಿ 'ನನ್ನ ಗಂಡನೇ ಬೇಡುವೆ-ಗೌರಿತನಯ' ಎಂದು ಪ್ರಾರ್ಥಿಸಿದರು. ಇವರ ಪತಿನಿಷ್ಠೆಯ ಅರಿವಿದ್ದ ಸಭಾಸದರಿಗೆ ಕೌತುಕ ಮಿಶ್ರಿತ ಸಂತೋಷವಾಯಿತು.

ತುಂಗಮ್ಮಜ್ಜಿಯ ಮನೆಗೆ ಬಂದವರೇ ಏಕೆ, ಸಂಪರ್ಕಕ್ಕೆ ಬಂದವರು ಸಹ ಹಸಿದು ವಾಪಾಸು ಹೋಗುವಂತಿಲ್ಲ. ಯಾರು ಎಷ್ಟೇ ಹೊತ್ತಿಗೆಅವರ ಮನೆಗೆ ಬರಲಿ, ಅವರ ಬತ್ತಳಿಕೆಯಿಂದ ಹೊರಬರುತ್ತಿದ್ದ ಪ್ರಥಮ ಪ್ರಶ್ನೆಯ ಬಾಣವೆಂದರೆ-"ಊಟ ಆಗಿದ್ಯಾ?'

ಅವರ ಮನೆ ಸುತ್ತ ಅಡಿಕೆ ತೋಟ ಇತ್ತು. ಅದು ಅಡಿಕೆಗೆ ಚಿನ್ನದ ರೇಟ್ ಇದ್ದ ಕಾಲ. ಹೀಗಾಗಿ ರಾತ್ರಿ ಹೊತ್ತು ಫಸಲಿಗೆ ಬರುವ ಕೊನೆಗಳನ್ನು ಚಾಲಾಕಿ ಕಳ್ಳರು ಎಗರಿಸಿ, ಪರಾರಿಯಾಗುವುದು. ಸಾಮಾನ್ಯವಾಗಿತ್ತು. ಗೋಪುವಿನಂತಹ ಮೊಮ್ಮಕ್ಕಳು ಈ ವಿಷಯ ಅಜ್ಜಿಯ ಬಳಿ ದೂರಿದಾಗಲೂ ಅವರು ಅದನ್ನೊಂದು ದೊಡ್ಡ ವಿಷಯವೆಂದು ಪರಿಗಣಿಸಿದ್ದೇ ಇಲ್ಲ. 'ಹೋಗ್ಲಿ ಬಿಡ್ರೋ-ಪಾಪ-ಹೊಟ್ಟೆಪಾಡಿಗಾಗಿ ಕಳವು ಮಾಡಿರಬೇಕು-ಒಂದೇ ಗೊನೆ ತಾನೆ!'ಎಂದು ಕೇಸಿನ ತೀರ್ಮಾನ ಮಾಡುತ್ತಿದ್ದರು. ಒಂದು ರಾತ್ರಿ ಒಬ್ಬ ಕಳ್ಳ ಅಡಿಕೆ ಗೊನೆ ಕಡಿದು ಎರಡು ಕೋಣೆ ತುಂಬ ಕದ್ದ ಮಾಲನ್ನು ತುಂಬಿಕೊಳ್ಳುತ್ತಿರುವಾಗಲೇ ಗೋಪು ಪಟಾಲಂ ಕೈಗೆ ಸಿಕ್ಕಿ ಬಿದ್ದು ಮೂರು ಹುಡುಗರು ಸೇರಿ ಕಳ್ಳನನ್ನು ಅಜ್ಜಿಯ ಎದುರು ಹಾಜರುಪಡಿಸುತ್ತಾರೆ. ಅಜ್ಜಿ ಕೈಕಟ್ಟಿ ನಿಂತ ಕಳ್ಳನನ್ನು ಪೋಲಿಸ್ ಠೀವಿಯಲ್ಲಿ ಆಪಾದ ಮಸ್ತಕ ನೋಡುತ್ತಿರುವಾಗ ಹುಡುಗರಿಗೆ ತಾವು ಮಾಡಿದ ಸಾಹಸದ ಮೇಲೆ ಭಾರೀ ಗರ್ವ ಉಂಟಾಗುತ್ತದೆ. ಕಳ್ಳನಿಗೆ ಅಜ್ಜಿಯಿಂದ ಆಗಬಹುದಾದ ಶಿಕ್ಷೆಯನ್ನು ಎಣಿಸಿಯೇ ಒಳಗೊಳಗೇ ನಗು ಬರುತ್ತದೆ. ಆದರೆ ಅಜ್ಜಿ ಆ ಕಳ್ಳನನ್ನು ಸ್ವಲ್ಪ ಹೊತ್ತು ನೋಡಿ ಕೇಳಿದ ಪ್ರಶ್ನೆ ಎಂದರೆ 'ಏನೋ ಊಟ ಮಾಡ್ತೀಯಾ?' ಅಂತ. ಆ ಮೇಲೆ ಅವನಿಗೆ ಊಟ ಹಾಕಿ, ಉಪಚಾರ, ಉಪದೇಶಗಳನ್ನೆಲ್ಲ ಪೂರೈಸಿ, ಕೈಗೆ ಒಂದೈವತ್ತು ರೂಪಾಯಿಕೊಟ್ಟು ಕಳಿಸಿದರಂತೆ. ಈ ಅಜ್ಜಿಗೆ ದೂರು ಕೊಟ್ಟು ನಾವು ಕೆಟ್ಟೆವು-ಎಂದು ಹುಡುಗರು ಮನದಲ್ಲೇ ಹಿಡಿಶಾಪ ಹಾಕಿರಬೇಕು.

ಈ ತುಂಗಮ್ಮಜ್ಜಿಯ ಒಳ್ಳೆತನದ, ಮುಗ್ಧತೆಯ ಫಲಾನುಭವಿಗಳು ಅನೇಕ ಮಂದಿ ಇದ್ದರು. ಆದರೆ ಅವರಿಗೆ ಅವರ ಸರಳ, ಕಪಟರಹಿತ ಮಾತುಗಳೇ ಬಂಡವಾಳ. ಅವರ ಪಕ್ಕದ ಮನೆಯ ವಕೀಲರೊಬ್ಬರು ಆಕಸ್ಮಾತ್ ತೀರಿ ಹೋಗುತ್ತಾರೆ. ಇನ್ನೂ ಪಿಯುಸಿಯಲ್ಲಿ ಓದುತ್ತಿದ್ದ ವಕೀಲರ ಮಗ ತಂದೆಯ ಎಲ್ಲ ಅಪರ ಕಾರ್ಯಗಳನ್ನು ಶ್ರದ್ಧೆಯಿಂದ, ಕ್ರಮಬದ್ಧವಾಗಿ ನಡೆಸುತ್ತಿದ್ದ. ಕೊನೆಯ ದಿನ ವೈಕುಂಠ ಸಮಾರಾಧನೆಯಂದು ತುಂಗಮ್ಮಜ್ಜಿಯೂ ಅಲ್ಲಿಗೆ ಹೋಗಿದ್ದರು. ಓರ್ವ ಪುತ್ರ ತನ್ನ ಮೃತ ತಂದೆಯ ಅಪರ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡುತ್ತಿರುವುದನ್ನು ಕಂಡ ತುಂಗಮ್ಮಜ್ಜಿ ವಕೀಲರ ಮಡದಿಯ ಬಳಿ ಕುಳಿತು ಮೆತ್ತಗೆ ಹೇಳಿದರಂತೆ-'ಏನು ಕ್ರಮ-ಏನು ಶಿಸ್ತು, ಏನು ಭಕ್ತಿ ನಿಮ್ಮ ಮಗಂದು! ಅಬ್ಬಬ್ಬ-ಇದನ್ನೆಲ್ಲ ನೋಡೋದಕ್ಕೆ ವಕೀಲರು ಇರಬೇಕಿತ್ತು-ಎಷ್ಟೊಂದು ಸಂತೋಷಡುತ್ತಿದ್ದರಲ್ವಾ!'-ಎಂದು.

ತುಂಗಮ್ಮಜ್ಜಿಯ ಮುಗ್ಧ ಮಾತುಗಳಿಗೆ ಆ ವಕೀಲರ ಪತ್ನಿ ಏನೆಂದು ಉತ್ತರ ನೀಡಿದರೊ, ಗೊತ್ತಿಲ್ಲ!

# ಗೊಂಬೆ ನೋಡಿ ಗಾದೆ ಊಹಿಸಿ!

ಬನ್ನೇರುಘಟ್ಟದ **ಶ್ರೀಮತಿ ಸೀತಾಲಕ್ಷ್ಮಿ**ಯವರು ತಮ್ಮ ಫೇಸ್ ಬುಕ್ ಪುಟದಲ್ಲಿ ಹರಿಯಬಿಟ್ಟ ಸೃಜನಶೀಲ ಗೊಂಬೆ ಜೋಡಣೆಯನ್ನು ನಮ್ಮ ಓದುಗರಿಗೆ ತಲುಪಿಸುವ ಪ್ರಯತ್ನವಿದು.

ಇಲ್ಲಿನ ಪ್ರತಿಯೊಂದು ಜೋಡಣೆ ಒಂದು ಗಾದೆಯನ್ನು ನೆನಪಿಸುತ್ತದೆ. ಇಲ್ಲಿರುವ ಒಂಭತ್ತು ಜೋಡಣೆಗಳಲ್ಲಿ ಎಷ್ಟನ್ನು ಸರಿಯಾಗಿ ಊಹಿಸಬಲ್ಲಿರಿ?

*ಸರಿಯುತ್ತರಗಳು ಪುಟ 40*












4


5


6


7


8


9

# ನೀವೂ ಒಂದು ಕಾರ್ಡ್ ಮಾಡಿಸ್ಕೊಳ್ಳಿ..

● ವಸುಮತಿ ಉಡುಪ

ಜಾಣೆ ಅಂದರೆ ಜಾಣೆಯಲ್ಲ. ದಡ್ಡಿ ಅಂದರೆ ದಡ್ಡಿಯಲ್ಲ. ಒಳ್ಳೆಯವಳು ಅಂದರೆ ಒಳ್ಳೆಯವಳೇನಲ್ಲ. ಹಾಗಂತ ಕೆಟ್ಟವಳೂ ಅಲ್ಲ. ನಮ್ಮ ಮನೆಗೆಲಸಕ್ಕೆ ಬರುವ, ಈಗಷ್ಟೇ ಹದಿವಯಸ್ಸು ದಾಟಿದ ಹುಡುಗಿಯನ್ನು ಹೀಗೆ ವರ್ಣಿಸಬಹುದು ಅಂತ ನನ್ನ ಅನುಭವ. ಹಿಂದಿದ್ದ ಮೌನಗೌರಿ ಮದುವೆಯಾಗಿ ಕಳಚಿಕೊಂಡಳು. ಅವಳ ಜಾಗಕ್ಕೆ ಇವಳು ಬಂದಳು. ಬರವಣಿಗೆಯ ಅನುಕೂಲಕ್ಕೆ ಅವಳ ಹೆಸರನ್ನು ಅಶ್ವಿನಿ ಅಂತ ಇಟ್ಟುಕೊಳ್ಳೋಣ. ಹೆಸರು ಬದಲಿಸಬೇಕಾದ ಪ್ರಮೇಯವೇನಿಲ್ಲ. ಆದರೂ ಬದಲಿಸಲಾಗಿದೆ. ಬಂದ ಮೊದಲ ದಿನದಿಂದಲೇ ಅದೆಷ್ಟು ತಲೆ ತಿನ್ನಲು ಶುರುಮಾಡಿದಳು ಅಂದರೆ 'ಮರದ ಬಾಯಿ ಆಗಿದ್ದರೆ ಒಡೆದು ಹೋಗುತ್ತಿತ್ತು' ಅನ್ನುವಷ್ಟು. ಮೊದಲೇ ನಾನು ಮಾತಿನ ವಿಷಯದಲ್ಲಿ ಚೌಕಾಶಿ. ಇವಳ ನಿರಂತರ ಪ್ರಶ್ನೆಗಳಿಗೆ ಉತ್ತರ ಕೊಡಲೇಬೇಕಾದ ಪರಿಸ್ಥಿತಿ. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಕೆಲಸಕ್ಕೆ ಹಾಜರಿ ಹಾಕತೊಡಗಿದ ಕೆಲವೇ ದಿನಗಳಲ್ಲಿ ನನ್ನ ಪೂರ್ವಾಪರಗಳನ್ನೆಲ್ಲಾ ಕುತೂಹಲದಿಂದ ಕೇಳಿ ಕೇಳಿ ಮನದಟ್ಟಾಗಿಸಿಕೊಂಡಳು. ಸರಿಯಾಗಿ ಮಾಡಿದರೆ ಅರ್ಧ, ಮುಕ್ಕಾಲು ಘಂಟೆಯಲ್ಲಿ ಮುಗಿಸಿ ಹೋಗಬಹುದಾದ ಕೆಲಸವನ್ನು ಎರಡು, ಎರಡೂವರೆ ಘಂಟೆ ಎಳೆಯುವುದು ಇವಳ ದಿನದ ರೂಢಿ. ಧಡಬಡ ಕೆಲಸ ಮುಗಿಸಿ ಮುಂದಿನ ಮನೆಗೆ ಓಡಿಹೋಗುವವರ ನಡುವೆ ಇವಳೊಂದು ಅಪವಾದ. ಒಂದು ಕೈಯಲ್ಲಿ ನೆಲ ವರೆಸುವ ಬಟ್ಟೆ, ಇನ್ನೊಂದರಲ್ಲಿ ಪೊರಕೆ ಹಿಡಿದು ಮಾತಿಗೆ ನಿಂತಳು ಅಂದರೆ ಹೊತ್ತು ಹೋಗುವುದು ಗಡಿಯಾರಕ್ಕಷ್ಟೇ ಗೊತ್ತು. ಬಂದ ಮೊದಲ ದಿನವೇ 'ಪೈಂಟ್ ಮಾಡ್ಸಲ್ವಾ ಆಂಟಿ? ಗೋಡೆ ಹೇಗಾಗಿದೆ ನೋಡಿ..' ಎಂದು ಬೆಟ್ಟು ಮಾಡಿದವಳ ಚಾಣಾಕ್ಷತೆಗೆ ಕಾರಣವನ್ನು ಲೇಖನದ ಕೊನೆಗೆ ಉದ್ದೇಶಪೂರ್ವಕವಾಗಿ ಕಾದಿರಿಸಲಾಗಿದೆ ಎನ್ನುತ್ತಾ ಮುಂದುವರಿಯುತ್ತೇನೆ.

"ಇನ್ನೂ ಪೈಂಟ್ ಮಾಡ್ಸಿ ಎರಡು ವರ್ಷ ಆಗಿಲ್ಲ ಕಣೇ. ನಿನ್ನ ಕಣ್ಣಿಗೆ ಗೋಡೆ ಮಸುಕಾದ ಹಾಗೆ ಕಾಣ್ಸುತ್ತಾ?" ಕೊಂಚ ಅಸಹನೆಯಿಂದಲೇ ಕೇಳಿದೆ. ಈ ಪೈಂಟ್ ಮಾಡಿಸುವ ತುರ್ತಿನ ವಿಷಯ ಆಗಾಗ ಅವಳ ಬಾಯಿಂದ ಉದುರಿ ಬೀಳುತ್ತಲೇ ಇತ್ತು. ನನ್ನ ಸಹನೆಯನ್ನು ಕೆಣಕುತ್ತಲೇ ಇತ್ತು. ಕೆಲವೊಂದು ಉದಾಹರಣೆಗಳ ಸಮೇತ ವಿವರಿಸಿದರೆ ಇವಳ ವಾಚಾಳಿತನ ಎಷ್ಟಿದೆ ಅನ್ನುವುದು ತಮಗೆ ಮನವರಿಕೆಯಾಗಬಹುದು ಅಂದುಕೊಳ್ಳುತ್ತೇನೆ.

**ಉದಾಹರಣೆ– 1**

ಹೊರಗೆ ಅಂಗಳ, ಬಾಗಿಲು ಗುಡಿಸಿ, ನೀರು ತಳೆದು, ಮನೆಯೊಳಗೆ ಬರುತ್ತಿದ್ದಂತೆ ಅವಳ ಮೊದಲ ಪ್ರಶ್ನೆ ಶುರು.

"ಸ್ನಾನ ಆಯ್ತಾ ಆಂಟಿ?"

"ಇಲ್ಲ ಇನ್ನೂ. ಮನೆಕೆಲಸ ಎಲ್ಲಾ ಆದ್ಮೇಲೇನೇ ಸ್ನಾನ ಮಾಡೋದು ನಾನು.."

"ಬೆಳಿಗ್ಗೆ ಎದ್ಕೂಡ್ಲೆ ಸ್ನಾನ ಮಾಡ್ಕಂಬಿಡಿ.."

"ಆಯ್ತಾಯ್ತು. ನಿನ್ನ ಕೆಲಸ ನೋಡ್ಕೋ ಹೋಗು"

**ಉದಾಹರಣೆ_2**

"ಹೊಸ ಸೀರಿಯಲ್ ಶುರುವಾಯ್ತಲ್ಲ, ನೋಡ್ತಿದೀರಾ ಆಂಟಿ? ಚೆನ್ನಾಗುಂಟು.."

"ನಾನು ಟೀವಿ ನೋಡಲ್ಲ ಮಾರಾಯ್ತೀ. ಅಪರೂಪಕ್ಕೆ ಮಾತ್ರಾ.."

"ಸೀರಿಯಲ್ ನೋಡಿ ಆಂಟೀ. ನಾನು ಎಲ್ಲಾನೂ ನೋಡ್ತೀನಿ. ಭಾನುವಾರ ಹೊಸಾ ಸಿನಿಮಾ ಹಾಕ್ತಾರೆ. ಅದನ್ನಾದ್ರೂ ನೋಡಿ"

"ನಂಗೆ ಅದೆಲ್ಲಾ ಇಷ್ಟ ಇಲ್ಲ"

"ಯಾಕೆ ಆಂಟೀ?"

"ಇಷ್ಟ ಇಲ್ಲ ಅಂದ್ರೆ ಇಷ್ಟ ಇಲ್ಲ. ಅಷ್ಟೇ.."

**ಉದಾಹರಣೆ_3**

"ಪೂಜೆ ಆಯ್ತಾ ಆಂಟೀ?"

"ಪೂಜೆ ಗೀಜೆ ಮಾಡಲ್ಲ ನಾನು. ದೇವರೆದುರು ದೀಪ ಹಚ್ಚಿ ನಾಲ್ಕು ಹೂವು ಏರಿಸಿದ್ರೆ ಮುಗೀತು.."

"ಒಂದೇ ದೀಪ ಹಚ್ಚಿಡ್ಬಾರ್ದು ಆಂಟೀ. ಎರಡು ದೀಪ ಹಚ್ಚಿಡ್ಬೇಕು"

"ಆಯ್ತು ಹೋಗೇ.."

"ಎಣ್ಣೆ ಖಾಲಿ ಆಗ್ತಿದೆ. ಇನ್ನೊಂದಿಷ್ಟು ಎಣ್ಣೆ ಹಾಕಿ ದೀಪಕ್ಕೆ.."

"ಸಾಕು ಸಾಕು. ಬೆಳಗಿಂದ ಉರೀತಿದೆ.."

ಈ ಪುಣ್ಯಾತ್ಗಿತ್ತಿ ಒಮ್ಮೆ ಕೆಲಸ ಮುಗಿಸಿ ಹೋದರೆ ಸಾಕು ಎನ್ನುವಷ್ಟು ತನ್ನ ವಾಗ್ಬಾಣಗಳಿಂದ ಕರ್ಕರೆ ಹಿಡಿಸಿಬಿಡುತ್ತಿದ್ದಳು. ಪ್ರತಿಯೊಂದಕ್ಕೂ ಹದ ಹೇಳುವುದು, ಮಾತಿನಿಂದ ಹಿಡಿದು ಹಾಕಲು ನೋಡುವುದು ಅವಳ ಚಾಪಲ್ಯ. ಮೊದಲಿಗೆ ಹೇಳಿದ ಉದಾಹರಣೆಗಳೆರಡನ್ನು ಮುಂದೆ ನಡೆದ ಒಂದಿಷ್ಟು ಬದಲಾವಣೆಯೊಂದಿಗೆ ತಮ್ಮ ಅವಗಾಹನೆಗೆ ತರುತ್ತೇನೆ.

**ಉದಾಹರಣೆ_1**

"ಸ್ನಾನ ಆಯ್ತಾ ಆಂಟಿ?"

"ಆಯ್ತು ಕಣೇ.." (ಸುಳ್ಳು ಎಂದು ನಿಮಗೆ ಗೊತ್ತಿರಲಿ)

"ಮತ್ತೆ? ಅದೇ ಸೀರೆ ಉಟ್ಗಂಡಿದೀರಿ?" (ಹೇಗೆ ಹಿಡಿದು ಹಾಕಿಬಿಟ್ಟೆ ನೋಡಿ ಎನ್ನುವ ಹೆಮ್ಮೆ ಮುಖದಲ್ಲಿ)

"ಯಾಕೆ? ಅದೇ ಸೀರೇನ ಇನ್ನೊಂದಿನ ಉಟ್ಕೋಬಾರ್ದಾ?

"ಕೊಳೆ ಆಗಿರುತ್ತೆ ಆಂಟೀ. ದಿನಾ ಸೀರೆ ಬದಲಾಯ್ಸಿ.." (ಅವಳ ಕೆಲಸದ ಲಿಸ್ಟಿನಲ್ಲಿ ಬಟ್ಟೆ ಒಗೆಯುವುದು ಸೇರಿಲ್ಲ)

"ಆಯ್ತು, ನೀ ಹೇಳಿದ ಹಾಗೇ ಕೇಳ್ತೀನಿ. ಮೊದಲು ನಿನ್ನ ಕೆಲಸ ಮುಗಿಸು"

## ಉದಾಹರಣೆ_2

"ಪೂಜೆ ಆಯ್ತಾ ಆಂಟೀ?"

"ಆಯ್ತು ಕಣೇ.." (ಬಿಳೀ ಸುಳ್ಳು)

"ದೀಪ ಉರೀತಿಲ್ಲ.."

"ಬೆಳಿಗ್ಗೆ ಹಚ್ಚಿಟ್ಟಿದ್ದು. ಆರ್ಹೋಗಿದೆ.."

"ಆಂಟೀ, ಹಳೇ ಹೂವು ಹಾಗೇ ಇದೆ. ಹೊಸ ಹೂವು ಹಾಕೇ ಇಲ್ಲ?" (ಹಿಡಿದು ಹಾಕಿದ ಹೆಮ್ಮೆ ಮತ್ತೊಮ್ಮೆ)

ಸದಾ ಕೈಲೊಂದು ಪುಸ್ತಕ ಹಿಡಿದಿರುವ ನಾನು ಅವಳಿಗೊಂದು ಒಗಟು. ಅವಳಿಗೆ ಅಕ್ಷರಜ್ಞಾನ ಇರಲಿ, ಗಡಿಯಾರ ನೋಡುವುದಕ್ಕೂ ಬರುವುದಿಲ್ಲ ಎನ್ನುವುದು ಗೊತ್ತಾದಾಗ ದಿಗ್ಭ್ರಮೆಯಾಗಿತ್ತು ನನಗೆ.

"ತಲೆಯೆಲ್ಲಾ ಮಾತಾಡ್ತಿ, ಯಾಕೇ ಓದ್ಲಿಲ್ಲ?"

"ಯಾಕೆ ಓದ್ಬೇಕು ಆಂಟೀ?"

"ದುಡ್ಡಿನ ಲೆಕ್ಕಾಚಾರಾನಾದ್ರೂ ನಿನಗೆ ಗೊತ್ತಾಗೋದು ಬೇಡ್ವಾ?"

"ಎಲ್ಲಾ ಗೊತ್ತಾಗುತ್ತೆ ನಂಗೆ.."

"ಏನು ಗೊತ್ತಾಗುತ್ತೋ, ನಿನ್ನ ತಲೆ.."

ನಾನು ಏನೇ ಅನ್ನಲಿ, ಏನೇ ಬೈಯಲಿ, ಸಿಟ್ಟು ಅನ್ನುವ ಪದ ಅವಳ ಡಿಕ್ಷನರಿಯಲ್ಲೇ ಇಲ್ಲ. ಅವಳ ವಾಚಾಳಿತನದಿಂದ ತೀರಾ ರೋಸಿ ಹೋಗಿ ನಾನು ಸಿಡುಕಿದರೆ,

"ಬೇಜಾರ್ಮಾಡ್ಕಂಬೇಡಿ ಆಂಟೀ.." ಎಂದು ನನಗೇ ಸಮಾಧಾನ ಹೇಳುತ್ತಾಳೆ ಚಿತ್ರಾಂಗಿ.

ಒಂದು ಸಲ ಹೀಗಾಯ್ತು. ಬ್ಲಡ್ ಟೆಸ್ಟಿಗೆ ಎಂದು ನಾನೂ, ಮನೆಯವರೂ ಲ್ಯಾಬಿಗೆ ಹೋಗಿದ್ದೆವು. ಒಂದೆರಡು ಮನೆಗಳ ಕೆಲಸ ಮುಗಿಸಿ ಒಂಭತ್ತು, ಒಂಭತ್ತೂವರೆಗೆ ಅಶ್ವಿನಿ ಬರುವುದರೊಳಗೆ ಮನೆಗೆ ವಾಪಸಾಗಬೇಕೆಂದು ನನ್ನ ಲೆಕ್ಕಾಚಾರ. ಆದರೆ ನಾವು ಬರುವ ಹೊತ್ತಿಗೆ ಅವಳಾಗಲೇ ಬಂದು ಹೊರಗಿನ ಕಸ ಗುಡಿಸುತ್ತಿದ್ದಳು. ಆ ಕೆಲಸ ಮುಗಿಸಿ ಒಳಗೆ ಬರುತ್ತಿದ್ದಂತೆ ಶುರುವಾಯ್ತು ಅವಳ ವಿಚಾರಣೆ,

"ಬೆಳಿಬೆಳಿಗ್ಗೆ ಎಲ್ಹೋಗಿದ್ರಿ ಆಂಟೀ?"

ಸತ್ಯ ಹೇಳಿದರೆ ಕಳೆದುಕೊಳ್ಳುವುದಕ್ಕೇನಿರಲಿಲ್ಲ. ಆದರೆ ಶುರುವಾಗುತ್ತದೆ ಪ್ರಶ್ನೆಗಳ ಸುರಿಮಳೆ. 'ಯಾಕೆ ಬ್ಲಡ್ ಟೆಸ್ಟು? ಏನಾಗಿದೆ? ಯಾವ ಡಾಕ್ಟರ ಹತ್ರ ಹೋಗ್ತೀರಿ? ಈ ಇವರ ಹತ್ರ ಹೋಗಿ ಆಂಟೀ, ಭಾರೀ ಒಳ್ಳೇ ಡಾಕ್ಟ್ರು..' ಈ ಪಟ್ಟಿ ಎಷ್ಟುದ್ದಕ್ಕೂ ಬೆಳೆಯಬಹುದು. ಇವಳ ಸಹವಾಸ ಆದಮೇಲೆ ಇವಳಿಂದ ತಪ್ಪಿಸಿಕೊಳ್ಳಲು ನಾನು ಸುಳ್ಳಾಡಲು ಕಲಿತಿದ್ದೇನೆಯೇ? ಯಾರಿಗೂ ತೊಂದರೆ ಕೊಡದ ಸುಳ್ಳಿಗೆ ದೋಷವಿಲ್ಲವೇ? 'ದೇವರೇ, ನನ್ನನ್ನು ಕ್ಷಮಿಸು' ಅಂದುಕೊಳ್ಳುತ್ತಾ ಸಲೀಸಾಗಿ ಹೇಳಿದೆ,

"ದೇವಸ್ಥಾನಕ್ಕೆ ಹೋಗಿದ್ವಿ ಕಣೇ.."

"ಯಾವ ದೇವಸ್ಥಾನ?" ನಿರೀಕ್ಷಿತ ಪ್ರಶ್ನೆ ಬಂದೇ ಬಂತು.

"ವೆಂಕರಮಣಸ್ವಾಮಿ ದೇವಸ್ಥಾನ"

"ಓ, ಶನಿವಾರ ಅಲ್ವಾ?" ನಂಬಿದಳು ಮುಗ್ಧೆ. ನಂಬಿದಳು ಅಂದುಕೊಂಡಿದ್ದ ಪೆದ್ದಿ ನಾನು. ಎರಡು ನಿಮಿಷ ಕಸ ಗುಡಿಸುವ ತನ್ನ ಕಾಯಕ ಮುಂದುವರಿಸಿದವಳು ಪೊರಕೆ ಸಮೇತ ಬಂದು ನನ್ನೆದುರು ನಿಂತಳು.

"ಆಂಟೀ.." ಅದೊಂಥರಾ ರಾಗವಾಗಿ ಕರೆದಳು.

"ಏನೇ? ಬೇಗ ಕೆಲಸ ಮುಗಿಸ್ಬಾರ್ದಾ?"

"ದೇವಸ್ಥಾನಕ್ಕೆ ಹೋದೋರು ಹಣೆಗೆ ಪ್ರಸಾದದ ಕುಂಕುಮ ಇಟ್ಕೊಂಡಿಲ್ವಲ್ಲ ಆಂಟೀ?"

"ಹಾಗೆ ಇಟ್ಕೋಬೇಕು ಅಂತ ರೂಲ್ಸ್ ಇದೆಯಾ?"

"ಪ್ರಸಾದದ ಹೂವೂ ಮುಡಿದಿಲ್ಲ?"

ತಲೆ ಚಿಟಗುಟ್ಟಿತು. ಒಂದು ಸುಳ್ಳು ಹೇಳಲು ಹೋದರೆ ಹತ್ತು ಫಜೀತಿ. ಇದಕ್ಕಿಂತಾ ಸತ್ಯ ಹೇಳಿದ್ದರೇ ಒಳ್ಳೆಯದಿತ್ತೇನೋ.

"ಹೋಗೇ ಮಾರಾಯ್ತಿ. ನಾನಿರೋದೇ ಹೀಗೆ, ಗೊತ್ತಾಯ್ತಾ?"

"ಬೇಜಾರ್ಮಾಡ್ಕಂಬೇಡಿ ಆಂಟೀ.." ಮಾಮೂಲಿನ ಡೈಲಾಗ್.

ಈ ಅಶ್ವಿನಿಯ ತಲೆಹರಟೆ ಮಾತಿನಿಂದ ಮೈ ಪರಚಿಕೊಳ್ಳುವಂತಾದ ಇನ್ನೊಂದು ಉದಾಹರಣೆ ಓದಿ. ಗ್ಯಾಸ್ ಸಿಲಿಂಡರ್ ಖಾಲಿಯಾಗಿತ್ತು. ಇವಳು ಕೆಲಸಕ್ಕೆ ಬಂದ ಹೊತ್ತಿನಲ್ಲೇ ಹೊಸ ಸಿಲಿಂಡರ್ ಮನೆಗೆ ಬಂತು.

"ಸಿಲಿಂಡರ್‌ಗೆ ಎಷ್ಟಾಗುತ್ತೆ ಆಂಟೀ?" ಕೇಳಿದಳು. ಪ್ರತಿಯೊಂದಕ್ಕೂ ಬಾಯಿ ಹಾಕಿಕೊಂಡು ಬರದಿದ್ದರೆ ಅವಳಿಗೆ ತಿಂದನ್ನ ಅರಗುವುದೇ ಇಲ್ಲ.

"ಒಂದೊಂದು ಸಲ ಒಂದೊಂದು ರೇಟು ಕಣೇ.." ಈ ಸಲ ಸತ್ಯ ಹೇಳಿದೆ. (ಅಯ್ಯೋ, ನನ್ನನ್ನೇ ಒಪ್ಪಿಟ್ಟುಕೊಳ್ಳುವ ದುಸ್ಥಿತಿ)

"ನಮಗೆ ಗೌರ್ಮೆಂಟಿನೋರು ಗ್ಯಾಸ್ ಒಲೆ, ಸಿಲಿಂಡರ್ ಕೊಟ್ಟಿದಾರೆ ಆಂಟೀ.."

"ಒಳ್ಳೇದಾಯ್ತು ಬಿಡು.."

"ಅಕ್ಕಿ, ಸಕ್ಕರೆ, ಎಣ್ಣೆ, ಸೋಪು, ಶಾಂಪೂ ಎಲ್ಲಾ ಸಿಗುತ್ತೆ.."

"ನಿಮಗೆಲ್ಲಾ ಬಿ.ಪಿ.ಎಲ್. ಕಾರ್ಡ್ ಇದೆ, ಕೊಡ್ತಾರೆ.."

"ಆಂಟೀ.."

"ಏನೇ? ಮುಗೀಲಿಲ್ವಾ ಪುರಾಣ?"

"ನೀವೂ ಒಂದು ಕಾರ್ಡ್ ಮಾಡಿಸ್ಕೊಂಬಿಡಿ ಆಂಟೀ. ಯಾಕೆ ಜಾಸ್ತಿ ದುಡ್ಡು ಕೊಟ್ಟು ಎಲ್ಲಾ ತಗಂತೀರಿ?"

ಅಶ್ವಿನಿಯ ಬಾಯಿಂದ ಇಂತಾ ನುಡಿಮುತ್ತುಗಳನ್ನು ಕೇಳಿ ಪಾವನವಾಯಿತು

ನನ್ನ ಜನ್ಮ. ದೊಡ್ಡಸ್ತಿಕೆಯ ಕೊಂಬು ಮುರಿಯಿತು. ಕೈತುಂಬಾ ಪಿಂಚಣಿ ಎಣಿಸುವ ನಿವೃತ್ತ ಪ್ರಾಂಶುಪಾಲರ ಪತ್ನಿ ಎನ್ನುವ ಹೆಮ್ಮೆ ಕಳಚಿ ಬಿತ್ತು. ಏನು ಹೇಳಬೇಕು ಇವಳಿಗೆ? ಹೇಳಿದರೆ ಅರ್ಥವಾಗಬೇಕಲ್ಲ? ಲೇಖನದ ಪ್ರಾರಂಭದಲ್ಲಿ ಹೇಳಿದ, 'ಜಾಣೆ ಅಂದರೆ ಜಾಣೆಯಲ್ಲ..' ಇತ್ಯಾದಿ ವಾಕ್ಯಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ.

ಒಂದು ದಿನ ಯಾರೂ ಇಲ್ಲದ ಸಮಯದಲ್ಲಿ ಅಶ್ವಿನಿ ಆಪ್ತವಾಗಿ ತನ್ನದೊಂದು ಗುಟ್ಟನ್ನು ನನ್ನೆದುರು ಬಹಿರಂಗಪಡಿಸಿದಳು. ಪುಣ್ಯಾತ್ಗಿತ್ತಿ ಯಾರನ್ನೋ ಲೌವ್ ಮಾಡುತ್ತಿದ್ದಾಳಂತೆ. ಅವಳ ಮನೆಯವರಿಗೆ ವಿಷಯ ಗೊತ್ತಿಲ್ಲ. ಅವರು ಖಂಡಿತಾ ಈ ಮದುವೆಗೆ ಒಪ್ಪುವುದಿಲ್ಲ. ಹುಡುಗನ ಜಾತಿ ಬೇರೆ. ಅವಳ ಆ ಪ್ರಿಯಕರ ಅವನ ತಂಗಿಯ ಮದುವೆ ಆದಮೇಲೆ ಇವಳನ್ನು ಮದುವೆ ಮಾಡಿಕೊಳ್ಳುತ್ತಾನಂತೆ. ಕೇಳಿ ಬೆಚ್ಚಿಬಿದ್ದೆ.

"ಸಿನಿಮಾ ನೋಡಿ ನೋಡಿ ಕೆಟ್ಹೋಗಿದ್ದಿ ನೀನು. ಹುಷಾರಾಗಿರ್ಬೇಕು ಕಣೇ. ಕಾಲ ಸರಿಯಾಗಿಲ್ಲ.."

"ಅವನು ತುಂಬಾ ಒಳ್ಳೆಯೋನು ಆಂಟೀ.."

"ಏನು ಕೆಲಸ ಮಾಡ್ತಾನೆ?"

"ಪೈಂಟ್ ಮಾಡ್ತಾನೆ. ಒಂದಿನ ಕರ್ಕೊಂಬರ್ತೀನಿ ಅವನನ್ನ.."

"ಯಾಕೇ?"

"ಅವನ ಹತ್ರಾನೇ ಪೈಂಟ್ ಮಾಡಿಸಿ ಆಂಟೀ.."

ಅಬ್ಬಾ ಚದುರೆ. ಮನೆಗೆ ಬರುಬರುತ್ತಿದ್ದ ಹಾಗೆ ಪೈಂಟ್‌ನ ವಿಷಯ ಮಾತಾಡಿದ್ದು ಇದಕ್ಕೇನಾ?

"ಅಶ್ವಿನಿ, ತಮಾಷೆ ಅಂದ್ಕೋಬೇಡ. ಮನೆಯೋರಿಗೆ ಗೊತ್ತಿಲ್ದೆ ಲೌ ಗಿವ್ ಅಂತ ಹುಚ್ಚು ಹಿಡಿಸ್ಕೋಬೇಡ. ಈ ವಯಸ್ಸಿಗೆ ಎಲ್ರೂ ಒಳ್ಳೋರಾಗಿ ಕಾಣ್ತಾರೆ. ಎಲ್ರೂ ಚೆನ್ನಾಗೇ ಕಾಣ್ತಾರೆ. ನಿನ್ನ ಬುದ್ಧಿ ನಿನ್ನ ಕೈಲಿರ್ಬೇಕು.." ಗಂಭೀರವಾಗಿ ಹೇಳಿದೆ. ಈ ಮಾತು ಎಷ್ಟು ಅವಳ ತಲೆಗೆ ಹೋಯಿತೋ?

"ನಂಗೆ ಅಷ್ಟೂ ಗೊತ್ತಾಗಲ್ವಾ?" ಅಂದಳು ಅಶ್ವಿನಿ. ಇದಕ್ಕೂ ಮೀರಿ ನಾನೇನು ಮಾಡುವಂತಿದೆ? ದಿನಾ ಕಣ್ಣೆದುರು ನೋಡುತ್ತಿರುವ ಒಂದು ಹುಡುಗಿಯ ಭವಿಷ್ಯ ಹಾಳಾಗದಿರಲಿ ಎಂದು ಹಾರೈಸುವುದಷ್ಟೇ ನನ್ನಿಂದ ಸಾಧ್ಯವಾಗುವಂತಾದ್ದು.

ಇಂತಾದ್ದೊಂದು ಅತಿರೇಕದ ಸ್ವಭಾವದವಳನ್ನು ಯಾಕೆ ಕೆಲಸಕ್ಕಿಟ್ಟುಕೊಂಡಿದ್ದು, ಬೇಡ ಎಂದು ಕಳಿಸಿಬಿಡಲು ಏನಿದೆ ಅಡ್ಡಿ ಎನ್ನುವ ಪ್ರಶ್ನೆ ಎಲ್ಲರ ಮನಸ್ಸಿನಲ್ಲಿ ಬಂದೇ ಬರುತ್ತದೆ, ಗೊತ್ತಿದೆ ನನಗೆ. ಅಶ್ವಿನಿಯಷ್ಟು ಚೆನ್ನಾಗಿ ಮನೆಗೆಲಸ ಮಾಡುವ ಹುಡುಗಿಯನ್ನು ಇದುವರೆಗೆ ನಾನು ಕಂಡೇ ಇಲ್ಲ ಅಂದರೆ ಉತ್ಪ್ರೇಕ್ಷೆಯ ಮಾತಲ್ಲ. ಮನೆಯ ಕಾಂಪೌಂಡು, ಕಿಟಕಿಯ ದಂಡೆಗಳನ್ನೆಲ್ಲಾ ಹೇಳಿಸಿಕೊಳ್ಳದೆ ತೊಳೆಯುವ ಅವಳ ಪ್ರತಿಯೊಂದು ಕೆಲಸಗಳೂ ಸಾವಕಾಶ, ಚೊಕ್ಕ, ಅಚ್ಚುಕಟ್ಟು. ಸಂದಿಮೂಲೆ ಬಿಡದೆ ಕಸ ಗುಡಿಸುತ್ತಾಳೆ. ಲಕಲಕ ಎನ್ನುವಂತೆ ನೆಲ ವರೆಸುತ್ತಾಳೆ. ಸೋಫಾಸೆಟ್ಟನ್ನೂ ಆಗೀಗ ಈಚೆಗೆಳೆದು, ಬೇಡ ಬಿಡಿ, ತೀರಾ ಹೇಳಹೊರಟರೆ ಹೊಗಳಿಕೆ ಅನ್ನಿಸೀತು. ನಮ್ಮ ಬಡಾವಣೆಯಲ್ಲಿ ಮನೆಗೆಲಸಕ್ಕೆ ಬರುವವರು

ನಿರೀಕ್ಷಿಸುವ ನಿಗದಿತ ಕೂಲಿಯನ್ನೇ ನಾನು ಅವಳಿಗೆ ಕೊಡುತ್ತೇನೆ. ತೀರಾ ಹೆಚ್ಚು ಮನೆಗಳನ್ನು ಮೈಮೇಲೆ ಎಳೆದುಕೊಳ್ಳದೆ (ನಾಲ್ಕು ಮನೆ ಸಾಕು ಅಂದಿದ್ದಾಳಂತೆ ಅವಳಮ್ಮ. ಏಕೈಕ ಪುತ್ರಿ ಇವಳು) ಮನಸ್ಸುಗೊಟ್ಟು ತಮ್ಮ ಕೆಲಸ ಮಾಡುವ ಇಂತವರು ಈ ಕಾಲದಲ್ಲಿ ಸಿಗುತ್ತಾರೆಯೇ? ಸಿಕ್ಕಿದರೂ ನಮ್ಮ ಸಮಯಕ್ಕೆ ಬರುತ್ತಾರೆಯೇ? ನಮಗೆ ಹಿತವಾಗುವಂತೆ ಕೆಲಸ ಮಾಡುತ್ತಾರೆಯೇ?

"ನಿನ್ನ ಮದುವೆಯಾಗುವವರೆಗೆ ನಮ್ಮ ಮನೆಗೆಲಸಕ್ಕೆ ನೀನೇ.." ಅಂದಿದ್ದೇನೆ.

"ಆಮೇಲೂ ಬರ್ತೀನಿ" ಅಂದಿದ್ದಾಳೆ ಅಶ್ವಿನಿ.

'ದೋಸೆ ಮಾಡ್ಬೇಕಾದ್ರೆ ಮೇಲೆ ನೀರುಳ್ಳಿ, ಕ್ಯಾರೆಟ್‌ತುರಿ ಹಾಕಿ ಆಂಟೀ. ಚೆನ್ನಾಗಿರುತ್ತೆ.." ಎಂದೆಲ್ಲಾ ಬಾಯಿ ಹಾಕಿಕೊಂಡು ಬರುವ ಅಶ್ವಿನಿಯನ್ನು ಯಾವ ಸ್ವಾರ್ಥದ ಕಾರಣದಿಂದ ನಾನು ಸೈಸಿಕೊಂಡಿದ್ದೇನೆ ಎಂದು ಈಗಲಾದರೂ ನಿಮಗೆ ಅರ್ಥವಾಗಿರಬಹುದು, ಅಲ್ಲವೇ?

■

---

## ಡಾ. ಎಚ್ ಕೆ ನಂಜುಂಡಸ್ವಾಮಿ ಉವಾಚ

- ನಿನ್ನ ತಲೆಯಲ್ಲಿ ಬುದ್ಧಿ ಇಲ್ಲ ಎಂದರೆ ಕೈಯಲ್ಲಿ ಐಪಾಡ್ ಇದೆಯಲ್ಲ ಎಂದನಂತೆ.
- ಅಂಗಡಿಯಲ್ಲಿ ಚಿನ್ನ ಕೊಂಡ್ಯಲ್ಲ ರಶೀತಿ ಕೊಡಲಿಲ್ಲವೆ? ರಶೀತಿಯೇನೋ ಕೈಯಲ್ಲಿದೆ ಆದರೆ ವ್ಯಾಪಾರಿ ನಾಪತ್ತೆ.
- ಆಕ್ಸಿಡೆಂಟ್ ಆಯಿತು ಎಂದು ಕೇಳಿದೆ. ಗಾಡಿಗೇನೂ ತುಂಬಾ ಜಖಂ ಆಗಲಿಲ್ಲವೆ?
- ಮಲಗಲು ಹಾಸಿಗೆ ಹಾಸಲೆ ಎಂದರೆ ಬೇಡ, ಆಫೀಸಿಗೆ ಹೋಗ್ತೀನಿ ಅಂದನಂತೆ.
- ಭಜನೆ: ಒಬ್ಬರ ಅಪಸ್ವರವನ್ನು ಇನ್ನೊಬ್ಬರ ಅಪಸ್ವರದಿಂದ ಮರೆಮಾಡುವ ಅವಕಾಶ.
- ಪ್ರಸಾದಕ್ಕೆ ಸಿಹಿ ಕಮ್ಮಿ ಇದೆ. ದೇವರಿಗೇನು ಡಯಾಬಿಟಿಸ್ಸೇ?
- ಅತಿ ಚಿಕ್ಕ ಗುಡಿ: ನೀವು ಒಳಗೆ ಹೋದರೆ ದೇವರು ಹೊರಗೆ ಬರಬೇಕಾಗುತ್ತದೆ?
- ಕಣ್ಣೇ ಕಾಣದವನಿಗೆ ಕನ್ನಡಕ ಏಕೆ?
- ನಿನಗೆ ಎಷ್ಟು ವರ್ಷ ಎಂದರೆ 'ಅಮ್ಮ ಹೇಳಿದ್ದೋ? ಅಪ್ಪ ಸ್ಕೂಲಿಗೆ ಕೊಟ್ಟಿದ್ದೋ?' ಎಂದು ಕೇಳಿದ.
- ಹಿಂದಿನ ಕಾಲದಲ್ಲಿ ಬೀದಿ ದೀಪ ಹತ್ತಿದೆಯೋ ಇಲ್ಲವೋ ಎಂದು ನೋಡಲು ಟಾರ್ಚ್ ಬೇಕಾಗುತ್ತಿತ್ತು.
- ಪುಟ್ಟರಾಜು ಪದ್ಯ ಬರೆಯಲು ಶುರುಮಾಡಿದಾನೆ. ಹೇಗಾದರೂ ಮಾಡಿ ಈಗಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಕಾದಂಬರಿ ಗೀದಂಬರಿ ಬರೆಯಲು ಪ್ರಾರಂಭಿಸಿಬಿಟ್ಟಾನು!

*(ಲೇಖಕರ 'ಕನ್ನಡ ಗಿನ್ನಡ' ಪುಸ್ತಕದಿಂದ ಅನಾಮತ್ತಾಗಿ ಎತ್ತಿದ್ದು)*

# ಒಂದು (ತಲೆ)ಹರಟೆ - ಚೋರ ಪುರಾಣ

● ಟಿ. ಎಸ್. ಶ್ರವಣ ಕುಮಾರಿ

ಕಳ್ಳತನವೇನು ಇಂದು ನಿನ್ನೆಯದೆ?! ಕೃತಯುಗದಲ್ಲೇ ಆರಂಭವಾಗಿದೆ ನೋಡಿ ಕದ್ದಿದ್ದಾದರೂ ಅಂತಿಂಥದನ್ನೇ? ಭೂಮಿಯನ್ನೇ ಕದ್ದು ಅಡಗಿಸಿಟ್ಟಿದ್ದನ್ನು ವರಾಹಸ್ವಾಮಿಯು ಮರಳಿ ತರಲಿಲ್ಲವೆ? ತ್ರೇತಾಯುಗದಲ್ಲಿ ರಾವಣ ಸೀತೆಯನ್ನು ಕದ್ದೊಯ್ದ. ಕದ್ದೊಯ್ದ ಹೆಂಡತಿಯನ್ನು ಮರಳಿ ಪಡೆಯಲು ಮಾಡಿದ ಪ್ರಯತ್ನದಲ್ಲಿ ಎಷ್ಟೊಂದು ಪಾತ್ರಗಳು, ಉಪಕತೆಗಳು, ಸಾಹಸಗಳು, ಯುದ್ಧಗಳು ಎಲ್ಲವೂ ಸೇರಿಕೊಂಡು ರಾಮಾಯಣವನ್ನು ಒಂದು ಮಹಾಕಾವ್ಯವಾಗಿಸಿದೆಯಲ್ಲ!

ಇನ್ನು ದ್ವಾಪರ ಯುಗದ ಕೃಷ್ಣನೋ ತಾನೇ ಹಾಲು, ಮೊಸರು, ಬೆಣ್ಣೆಗಳ ಕಳ್ಳ, ಗೋಪಿಯರ ಸೀರೆಯ ಕಳ್ಳ, ರಾಧೆಯ ಹೃದಯ ಚೋರ, ಮಾನಿನಿಯರ ಚಿತ್ತ ಚೋರ.. ಈ ಜಗದಲ್ಲಿ ತುಡುಗು ಮಾಡಿಯೂ ಪರಮಾನಂದವನ್ನು ಕೊಟ್ಟವನು ಅವನೊಬ್ಬನೇ!! ಹೀಗೆ ಯುಗಾಂತರಗಳಿಂದ ನಡೆದು ಬಂದ ಚೋರವಿದ್ಯೆ ಕಲಿಯುಗದಲ್ಲಿ ಮಾಯವಾಗಲು ಸಾಧ್ಯವೇ? ವಿಧಾನಗಳು ಅನಂತವಾಗಿವೆ ಅಷ್ಟೇ.

ಬೃಹತ ಕಥಾ ಸರಿತ್ಸಾಗರದಂತ ಸಹಸ್ರ ಸಹಸ್ರ ಕತೆಗಳು, ಜಾನಪದ ಕತೆಗಳು, ಬೋಧಿ ಸತ್ವನ ಕತೆಗಳು, ಪಂಚತಂತ್ರದ ಕತೆಗಳು, ಬೇತಾಳನ ಕತೆಗಳು.. ನಮ್ಮ ದೇಶದ ಕತೆಗಳಷ್ಟೇ ಏಕೆ, ಅರೇಬಿಯನ್ ನೈಟ್ಸ್, ಈಸೋಪನ ನೀತಿ ಕತೆಗಳು.. ಇಂತಹ ಯಾವುದೇ ದೇಶದ, ಅದರಲ್ಲೂ ಮಕ್ಕಳ ಕತೆಗಳನ್ನು ಜಾಲಾಡಿದರೆ, ಕಳ್ಳರಿಲ್ಲದೇ ಇರುವಂತ ಕಥಾಮಂಜರಿಗಳು ಇಲ್ಲವೇ ಇಲ್ಲ.

ನೋಡಿ, ಮಕ್ಕಳ ಮನರಂಜಿಸುವಲ್ಲಿ, ಅವರ ಜ್ಞಾನ ವಿಕಸನದಲ್ಲಿ ಎಂತಹ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ ಕಳ್ಳರು! ಚಲನಚಿತ್ರಗಳಂತೂ ಬಿಡಿ ಪ್ರಪಂಚದ ಎಲ್ಲ ಭಾಷೆಗಳಲ್ಲೂ ಕಳ್ಳರು ತಮ್ಮ ಸಾಹಸಗಳನ್ನು ಮೆರೆದು ಹತ್ತು ಹಲವು ಹೆಸರು ಮಾಡಿದ ಚಿತ್ರಗಳಿಗೆ ನಾಯಕರಾಗಿಯೂ, ಖಳನಾಯಕರಾಗಿಯೂ ಸರಕಾಗಿದ್ದಾರೆ.

ಕಳ್ಳರು ಇಂತಲ್ಲಿಯೇ ಇರುತ್ತಾರೆ ಎಂದೇನಾದರೂ ನಿಯಮವಿದೆಯೇ. ಅವರು ಜಗದ್ವ್ಯಾಪಿಗಳು, ಭಗವಂತನಂತೆ!! ಎಲ್ಲೆಲ್ಲೂ ಇರುತ್ತಾರೆ. ಚಲನಚಿತ್ರದಲ್ಲೋ, ಕತೆಯಲ್ಲೋ ತೋರುವಂತೆ ಬೋಡು ತಲೆ, ದಪ್ಪ ಮೀಸೆ. ಹಣೆಯ ಮೇಲೆ ಹೆದರಿಸುವಂತ ರಾರಾಜಿಸುವ ತಿಲಕ, ಕೈಯ್ಯಲ್ಲೊಂದು ಆಯುಧ ಇವೆಲ್ಲಾ ಮಕ್ಕಳಿಗೆ ಹೇಳುವ ಕತೆಯಷ್ಟೆ ಅತ್ಯಂತ ಸುಸಂಸ್ಕೃತ ಸಜ್ಜನರ, ಅಮಾಯಕರ ವೇಷದಲ್ಲಿ ಕೊಳ್ಳೆ ಹೊಡೆದು ದೋಚುವವರ ಸಂತತಿ ಹೆಚ್ಚಾಗುತ್ತಿದೆ.

ಬಸ್ಸು, ರೈಲು, ಮಾರ್ಕೆಟ್ಟು, ಮಾಲುಗಳು, ಸಿನಿಮಾ ಥೇಟರು, ಮದುವೆ ಛತ್ರ ಮುಂತಾದವಿರಲಿ, ದೇಗುಲಗಳೂ ಸಹ ಚೋರರ ಆಡೊಂಬೊಲವಾಗಿದೆ! ಒಟ್ಟಿನಲ್ಲಿ ಎಲ್ಲೆಲ್ಲಿ ಜನಜಂಗುಳಿಯಿದ್ದರೆ ಅಲ್ಲೆಲ್ಲಾ ನಮ್ಮ ಅಣ್ಣತಮ್ಮಂದಿರಂತೆಯೇ ಓಡಾಡುತ್ತಾ ತಮ್ಮ ಚಳಕ ತೋರುತ್ತಿರುತ್ತಾರೆ. ಅವರೇನು ರಿಜಿಸ್ಟರ್ಡ್ ಪ್ರಾಕ್ಟೀಷನರ್ಸೇ? ಇಂತಹದೇ

ಜಾಗದಲ್ಲಿದ್ದು ವ್ಯವಹಾರ ನಡೆಸುವುದಕ್ಕೆ?! ಜಗವೆಲ್ಲಾ ಅವರದೇ. ಅದಕ್ಕೇ ಆಯಾ ಜಾಗದ ಮಾಲೀಕರು 'ನಿಮ್ಮ ಸ್ವತ್ತುಗಳಿಗೆ ನೀವೇ ಜವಾಬ್ದಾರರು' ಎನ್ನುವ ಬೋರ್ಡನ್ನು ತಗಲುಹಾಕಿ ತಾವು ಸುರಕ್ಷಿತರಾಗಿರುತ್ತಾರೆ!

'ಕಳ್ಳತನ ಒಂದು ಕೆಟ್ಟ ಕೆಲಸ' ಎನ್ನುವುದನ್ನು ಜಗತ್ತೇ ಒಪ್ಪಿಕೊಂಡಿದೆ. ಕಳಬೇಡ ಕೊಲಬೇಡ. ಎಂಬ ಅನರ್ಘ್ಯ, ಅಮೂಲ್ಯ ವಚನವನ್ನು ಜಗತ್ತಿಗೆ ನೀಡಿದ ಮಹಾತ್ಮ ಬಸವಣ್ಣನವರ ಮನೆಯಲ್ಲೇ ಕಳುವಾಯಿತಂತೆ! ಇನ್ನು ಪರರ ಪಾಡೇನು?? ಆಗ 'ನಿನ್ನ ಮೈಮೇಲೆ ಬಂಗಾರವಿಟ್ಟುಕೊಂಡಿದ್ದೇ ತಪ್ಪು; ತಪ್ಪು ಕಳ್ಳನದಲ್ಲ' ಎಂದು ಹೆಂಡತಿಯನ್ನು ಆರೋಪಿಸಿ, ಕಳ್ಳನನ್ನೇ ವಹಿಸಿಕೊಂಡ ಮಹಾನುಭಾವರು ಅವರು.

ಹುಲುಮಾನವರಾದ ನಾವು ಈ ಧೋರಣೆ ತಳೆಯುವುದು ಸಾಧ್ಯವೇ?! ಕಷ್ಟಪಟ್ಟು ಗಳಿಸಿದ ಒಂದಿಷ್ಟರಲ್ಲಿ ಅಷ್ಟೋ, ಇಷ್ಟೋ ಹಣವನ್ನು ಎಷ್ಟೋ ಕಾಲ ಉಳಿಸಿ ಒಂದಿಷ್ಟು ಇಟ್ಟುಕೊಂಡಿದ್ದೇ ಕಳ್ಳರ ಪಾಲಾದರೆ ದುಃಖ ಪಡದಂತ ಸ್ಥಿತಪ್ರಜ್ಞರು ನಾವಲ್ಲ. ತಕ್ಷಣ ಪೊಲೀಸ ಸ್ಟೇಷನ್ನಿಗೆ ಓಡಿ ಹೋಗಿ ದೂರು ನೀಡಿದರೆ, ನಮ್ಮ ದೂರಿಗೆ ಸಾಂತ್ವನವನ್ನು ನೀಡದೆ ನಮ್ಮ ಬೇಜವಾಬ್ದಾರಿತನವನ್ನೇ ಹೈಲೈಟ್ ಮಾಡಿ ತಮ್ಮ ಹುಡುಕುವ ಜವಾಬ್ದಾರಿಯನ್ನು ಆ ಕ್ಷಣದಲ್ಲೇ ಸ್ವಲ್ಪ ಕಡಿಮೆ ಮಾಡಿಕೊಳ್ಳುವ ಜಾಣತನವನ್ನು ತೋರಿ, ಅಲ್ಲಿಗೆ ತುಡುಗಾದ ನಮ್ಮ ಒಡವೆಯ ಆಸೆಯನ್ನು ಠಾಣೆಯ ಮೆಟ್ಟಿಲಲ್ಲೇ ಬಿಟ್ಟುಬರುವ ಮನಸ್ಥಿತಿಗೆ ನಮ್ಮನ್ನು ದೂಡದಿದ್ದರೆ ಅವರ್ಯಾಕೆ ಆರಕ್ಷಕರಾದಾರು?.

ಅರವತ್ನಾಲ್ಕು ವಿದ್ಯೆಗಳಲ್ಲಿ ಚೋರ ವಿದ್ಯೆಯೂ ಒಂದಂತೆ. ಮಿಕ್ಕೆಲ್ಲಾ ವಿದ್ಯೆಗಳಲ್ಲಿ ಪರಿಣಿತರಾಗಿ ಉನ್ನತಿಯನ್ನು ಸಾಧಿಸಿದರೆ ಬಂಗಾರದ, ಬೆಳ್ಳಿಯ ಪದಕಗಳು ಮತ್ತು ಇನ್ನಿತರ ಬೆಲೆಬಾಳುವ ವಸ್ತುಗಳು ಪಾರಿತೋಷಕವಾಗಿ ಲಭಿಸುವುದಾದರೆ, ಚೋರವಿದ್ಯೆಯಲ್ಲಿ ನಿಪುಣನಾದವನಿಗೆ ಒಂದಲ್ಲಾ ಒಂದು ದಿನ ಕಬ್ಬಿಣದ ಕಡಗ ಕೈಗೇರುವುದು ಗ್ಯಾರಂಟಿ. ಪುರಾಣಕಾಲದಿಂದಲೂ ಚೋರರು ಸಮಾಜದ ಒಂದು ಅವಿಭಾಜ್ಯ ಅಂಗವಾಗಿಯೇ ಬಂದಿದ್ದಾರೆ. ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆಯೇ ಎನ್ನುವ ಗಾದೆಯೇ ಇದ್ದರೂ, ಈ ಕರ್ಮಕ್ಕೆ ಒಂದಲ್ಲಾ ಒಂದು ದಿನ ಶಿಕ್ಷೆ ತಪ್ಪಿದ್ದಲ್ಲ ಎನ್ನುವ ಗ್ಯಾರಂಟಿ ಕಳ್ಳನಿಗೂ ಇದ್ದರೂ, ಏಕೆ, ಹೇಗೆ ಇದರ ಬಲೆಯಲ್ಲಿ ಬೀಳುತ್ತಾರೆ ಎಂದು ವಿಶ್ಲೇಷಿಸಹೊರಡುವುದು ಸಮಾಜಶಾಸ್ತ್ರಜ್ಞರ ಕೆಲಸ ಬಿಡಿ.

*ಸೌಜನ್ಯ : ಅವಧಿ*

---

ಕನ್ನಡ ಕಲಿಸಿ ಸಾಕೆನ್ನುವರು ಮಂದಿ
ಆದರೂ ಈ ಜಾಣರಿಗೆ ಬೇಕು ಹಿಂದಿ
ಕೆಲವರಿಗೆ ಆಂಗ್ಲ ಭಾಷೆಯ ಮೇಲೆ ಪ್ರೀತಿ
ಈ ಪರಿಸ್ಥಿತಿಯೊಳಗೆ ಮಕ್ಕಳಿಗೆ ಫಜೀತಿ

**– ದಿನಕರ ದೇಸಾಯಿ**

# ಟು ಡೈ ಆರ್ ನಾಟ್ ಟು ಡೈ

● ಡಾ. ಎಸ್. ಸುಧಾ

ಇದೇನೋ ಆಂಗ್ಲ ಭಾಷೆಯಲ್ಲಿ ಶೀರ್ಷಿಕೆ ಕೊಟ್ಟಿದ್ದಾರಲ್ಲಾ? ಏನು ಅರ್ಥ ಎಂದುಕೊಳ್ಳಬೇಡಿ. ಮೊದಲು ಯೋಚಿಸಿದಾಗ 'ನಾಟ್ ಟು ಡೈ' ಎನ್ನುವುದು ಅಂದರೆ ಸಾಯದೇ ಇರುವುದು. ಸಾಧ್ಯವೇ ಇಲ್ಲ ಅಲ್ಲವೇ? ಯಾರಾದರೂ ಈ ಭೂಮಿಯ ಮೇಲೆ ಅಮರವಾಗಿ ಇರಲು ಆಗುತ್ತದೆಯೇ? 'ಜಾತಸ್ಯ ಮರಣಂ ಧ್ರುವಂ' ಎಂದು ಹೇಳಿಲ್ಲವೇ? ಖಚಿತವಾಗಿ ನಾವೆಲ್ಲರೂ ಈ ಪ್ರಪಂಚಕ್ಕೆ ಒಂದು ದಿನ ವಿದಾಯ ಹೇಳಲೇಬೇಕು. 'ಅಂತಕನ ದೂತರಿಗೆ ಕಿಂಚಿತ್ತೂ ದಯವಿಲ್ಲ' ಎಂದು ಹೇಳಿದ್ದಾರೆ. ಪಕ್ಷಪಾತವಿಲ್ಲದವನು ಯಮಧರ್ಮರಾಯ. ಜಾತಿ, ಮತ ಯಾವುದನ್ನೂ ನೋಡುವುದಿಲ್ಲ. ಎಲ್ಲರನ್ನೂ ಎಲ್ಲಾ ವಯಸ್ಸಿನವರನ್ನೂ ಒಂದು ದಿನ ಎಳೆದೊಯ್ಯುತ್ತಾನೆ. ಆದ್ದರಿಂದ ಸಾಯುವುದಿಲ್ಲ ಎನ್ನುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಹಾಗಾದರೆ, ಶೀರ್ಷಿಕೆಯ ಅರ್ಥ ಏನಿರಬಹುದು? ತುಂಬಾ ಯೋಚಿಸಬೇಡಿ. ಇನ್ನೂ ಒಂದೆರಡು ಕೂದಲು ಬೆಳ್ಳಗಾಗಬಹುದು. ಈಗ ಅರ್ಥವಾಗಿರಬಹುದು. ನಾನು ಹೇಳುತ್ತಿರುವುದು ತಲೆಕೂದಲಿಗೆ ಬಣ್ಣ ಹಚ್ಚುವುದು ಸ್ವಾಮೀ. ಹ್ಞಾಂ ! ಅದೇ ನಾನು ಹೇಳುತ್ತಿರುವ 'ಟು ಡೈ' ಕೆಲವು ವರ್ಷಗಳಿಂದ ನನಗೆ ಇದೊಂದು ಜಿಜ್ಞಾಸೆ ಆಗಿಬಿಟ್ಟಿದೆ. ನನ್ನ ತಂದೆ ತಾಯಿ ಇಬ್ಬರೂ ತಮ್ಮ ಜೀನುಗಳ ಮೂಲಕ ನನಗೊಂದು ಬಳುವಳಿ ಕೊಟ್ಟಿದ್ದಾರೆ. ಅದೆಂದರೆ ಬೇಗ ಕೂದಲು ನರೆಯುವುದು. ಕಾಲೇಜಿನಲ್ಲಿ ಕೆಲಸ ಮಾಡುವಾಗ ಹದಿಹರೆಯದವರೊಡನೆ ಯಾವಾಗಲೂ ಒಡನಾಟವಿದ್ದುದರಿಂದ ಹಲವಾರು ವರ್ಷಗಳಿಂದ ಕೂದಲಿಗೆ ಬಣ್ಣ ಹಾಕುವುದು ಅಭ್ಯಾಸವಾಗಿತ್ತು. ನಿವೃತ್ತಿ ಹೊಂದಿದ ಮೇಲೆ ಇದು ಬಹಳ ಬೇಜಾರು ತರಿಸುವ ವಿಷಯವಾಯಿತು. ಹಾಗೇ ಮೆಲ್ಲನೆ ಈ ಬಣ್ಣದ ಸಹವಾಸವೂ ಕಡಿಮೆಯಾಯಿತು. ಇನ್ನೇನು ಬಿಟ್ಟುಹೋಯಿತು ಎಂದುಕೊಂಡಿದ್ದೇನೆ. ಕೆಲವರ ಕೂದಲು ಬಣ್ಣ ಹಚ್ಚಿ ಎಷ್ಟು ಕಪ್ಪಾಗಿ ಕಾಣುತ್ತದೆಂದರೆ, ನಿಜವಾಗಿ ಕಪ್ಪು ಕೂದಲು ಇರುವವರೂ ಹಾಗೆ ಕಾಣುವುದಿಲ್ಲ! ಇಷ್ಟಾಗಿ ಚಿಕ್ಕವಯಸ್ಸಿನಲ್ಲಿ ನರೆಕೂದಲು ಬಂದರೆ ಮುಚ್ಚಬೇಕೆನಿಸುತ್ತದೆ. ಇಲ್ಲದಿದ್ದರೆ ಯಾಕೆ? ಆದರೆ ಸಿನಿಮಾ ತಾರೆಯರು ಮಾತ್ರ ಎಂದೆಂದೂ ಚಿರಯೌವನರು. ಅವರು ಬಣ್ಣ ಹಚ್ಚುತ್ತಾರೆ. ಹಚ್ಚಬೇಕು. ಅಲ್ಲಿ ಬಾಹ್ಯ ಸೌಂದರ್ಯಕ್ಕೇ ಬೆಲೆ. ಏನು ಇಲ್ಲದಿದ್ದರೂ ಶ್ವೇತವರ್ಣದ ತಲೆ ಗೌರವ ಸಂಪಾದಿಸಲು ಸಹಾಯ ಮಾಡುತ್ತದೆ. ಅಜ್ಜ-ಅಜ್ಜಿ ಎನ್ನುವ ಬಿರುದು ಸಿಗುತ್ತದೆ! ಇಂತಹವರನ್ನು 'ಸೀನಿಯರ್ ಸಿಟಿಜ಼ನ್' ಅಂದರೆ ಹಿರಿಯ ನಾಗಕರಿಕರು ಎಂದು ಕರೆಯುವ ಬದಲು 'ಸಿಲ್ವರ್ ಸಿಟಿಜ಼ನ್' ಅರ್ಥಾತ್ 'ಬೆಳ್ಳಿ ನಾಗರಿಕರು' ಎಂದು ಕರೆಯುವುದು ಎಷ್ಟು ಚೆನ್ನಾಗಿದೆಯಲ್ಲವೇ? ಮುಖವೆಲ್ಲಾ ಸುಕ್ಕಾಗಿ, ಬೆನ್ನು ಬಾಗಿ ಇಷ್ಟೆಲ್ಲಾ ಆದರೂ ತಲೆಯಲ್ಲಿ ಒಂದೂ ಬಿಳಿಕೂದಲು ಇಲ್ಲ ಎಂದರೆ ಎಂತಹ ಅಪಹಾಸ್ಯ. ಬಿಳಿಕೂದಲನ್ನು ಕರಿಮಾಡದೆ ಎಷ್ಟು ಜನ ಪ್ರಸಿದ್ಧಿಗೆ ಬಂದಿಲ್ಲ. ಯೋಚಿಸಿ ನೋಡಿ, ಇತ್ತೀಚೆಗಂತೂ ಸುಧಾ ಮೂರ್ತಿಯವರ ಟಿ.ವಿ. ಸಂದರ್ಶನದಲ್ಲಿ ಸಂದರ್ಶಿಸಿದವರು ಈ ವಿಷಯದ ಬಗ್ಗೆ ಉದ್ಧಾರವೆತ್ತಿದ್ದಂತೂ ನಿಜ. ನನಗೆ ನೃತ್ಯಪಟು ಬಾಲ ಸರಸ್ವತಿಯವರ

ನೆನಪಾಗುತ್ತದೆ. ಬೆಳ್ಳಿಯ ಬಣ್ಣದ ಉದ್ದ ಕೂದಲು ಅವರದ್ದು. ಹಾಗೇ ಎಂ.ಎಸ್. ಸುಬ್ಬುಲಕ್ಷ್ಮಿಯವರ ಮುಕ್ಕಾಲುವಾಸಿ ನರೆತ ತಲೆ. ಅವರ ಮುಖದ ದೈವೀಕಳೆ ಯಾರಿಗೆ ಬರುತ್ತದೆ? ಇಂದಿರಾ ಗಾಂಧಿಯವರ ಮಧ್ಯದ ಬಿಳಿಯ ಕೂದಲಿನ ಭಾಗ. ಎಲ್ಲರೂ ಮೊದಲು ಇದು ಸಹಜವಾಗಿಯೇ ಇದೆ ಎಂದುಕೊಂಡಿದ್ದರು. ನಂತರ ಇದು ಮಿಕ್ಕ ಭಾಗಕ್ಕೆ ಬಣ್ಣ ತುಂಬಿ ಬಿಳಿಯ ಭಾಗವನ್ನು ಹಾಗೇ ಬಿಡುತ್ತಿದ್ದರು ಎಂದು ತಿಳಿಯಿತಂತೆ. ನಮ್ಮ ಬಾಹ್ಯಾಕಾಶ ವಿಜ್ಞಾನಿ, ಸಂತಸಮಾನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ, ಅವರ ಬಿಳಿಕೂದಲಿನ ವಿಶಿಷ್ಟ ಕೇಶಶೈಲಿ ಅವರ ಬ್ರಾಂಡ್ ಆಗಿತ್ತು ಅಲ್ಲವೇ? ನೀವಂದುಕೊಳ್ಳಬಹುದು. ಇವರೆಲ್ಲಾ ಬಹಳ ಪ್ರಸಿದ್ಧಿ ಪಡೆದವರು ಆದ್ದರಿಂದ ಜನ ಮೆಚ್ಚಿದ್ದರು. ನಮ್ಮಂತಹ ಸಾಧಾರಣ ವ್ಯಕ್ತಿಗಳೂ ಬಿಳಿ ತಲೆಯಿಟ್ಟುಕೊಂಡು ಓಡಾಡಿದರೆ ಮೆಚ್ಚುತ್ತಾರಾ? ಎಂದು. ವಾಸ್ತವದಲ್ಲಿ ನಮ್ಮ ತಲೆ ಬಿಳಿಯಾಗಿದ್ದರೂ ಅಥವಾ ಕಪ್ಪಗಿದ್ದರೂ ಯಾರಿಗೂ ಏನೂ ಆಗಬೇಕಾಗಿಲ್ಲ. ಯಾರೂ ಏನೂ ತಿಳಿಯುವುದೂ ಇಲ್ಲ. ಪೂರ್ತಿಯಾಗಿ ಬೊಕ್ಕತಲೆ ಆಗಿರುವವರಿಗೆ ಯೋಚನೆಯೇ ಇಲ್ಲ ಬಿಡಿ. ಅವರಿಗೆ ಯಾವ ಬಣ್ಣವೂ ಬೇಡ. ತಲೆಯ ಚರ್ಮದ ಬಣ್ಣವೇ ಸಾಕು! ಯೌವನದ ವ್ಯಾಮೋಹ ಇಂದಿನದಲ್ಲ. ಮಾನವ ಕುಲದಷ್ಟೇ ಹಳೆಯದು. ಯಯಾತಿ ಎಂತಹ ಸ್ವಾರ್ಥಿ ಎಂದರೆ ಮಗನ ಹತ್ತಿರವೇ ಯೌವನವನ್ನು ಕಸಿದುಕೊಂಡ. ಆದರೂ ಇತ್ತೀಚಿಗೆ ಬಾಹ್ಯ ಸೌಂದರ್ಯಕ್ಕೆ ಬೆಲೆ ಜಾಸ್ತಿಯಾಗುತ್ತಿದೆ ಎನ್ನಿಸುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಯಿಂದ ಹೀಗಿರಬಹುದು, ಇದರ ಅರ್ಥ ನೀಟಾಗಿರಬಾರದು ಎಂದಲ್ಲ. ಪ್ರತಿಯೊಬ್ಬರೂ ಒಪ್ಪ ಓರಣವಾಗಿಯೇ ಶಿಸ್ತಾಗಿಯೇ ಇರಬೇಕು.

ವೈಜ್ಞಾನಿಕವಾಗಿ ವಿಶ್ಲೇಷಿಸಿದರೆ ಮನುಷ್ಯನ ಚರ್ಮದಲ್ಲಿ ಮತ್ತು ಕೂದಲಿನಲ್ಲಿ ಮೆಲ್ಯಾನಿನ್ ಎನ್ನುವ ಬಣ್ಣದ ಪಿಗ್‌ಮೆಂಟ್ ಇರುತ್ತದೆ. ಇದೇ ಬಣ್ಣ ನೀಡುವುದು. ವಯಸ್ಸಾದ ಹಾಗೆ ಕೂದಲ ಬುಡದಲ್ಲಿರುವ ಅದರ ಬೇರಿನಲ್ಲಿ ಇದರ ವ್ಯುತ್ಪತ್ತಿ ಕುಂಠಿತವಾಗುತ್ತದೆ. ಪರಿಣಾಮವೇ ಬಿಳಿಯ ಕೂದಲು. ಬಣ್ಣ ಹಚ್ಚುವುದರಿಂದ ಅಡ್ಡ ಪರಿಣಾಮಗಳೇ ಜಾಸ್ತಿ. ಹಾನಿಕಾರಕ ರಾಸಾಯನಿಕಗಳು ಬಣ್ಣದಲ್ಲಿರುತ್ತವೆ. ಇವು ನಮ್ಮ ದೇಹವನ್ನು ಪ್ರವೇಶಿಸುತ್ತವೆ. ಮೂತ್ರಕೋಶದ ಕ್ಯಾನ್ಸರ್ ಉಂಟಾಗಬಹುದು ಎನ್ನುವ ಸಂಶಯವಿದೆ. ಬಣ್ಣ ಕಣ್ಣನ್ನೂ, ದೃಷ್ಟಿಯನ್ನು ಬಾಧಿಸುತ್ತದೆ ಎನ್ನುತ್ತಾರೆ. ಕೆಲವರಿಗೆ ಕೂದಲಿನ ಬಣ್ಣ ಚರ್ಮದ ಅಲರ್ಜಿ ಉಂಟುಮಾಡಬಹುದು. ಇದೆಲ್ಲವೂ ಬಣ್ಣದ ಪುರಾಣ!

ಈಗ ನಿಮ್ಮ ತಲೆಯೊಳಗೆ ಒಂದು ಹುಳ ಬಿಟ್ಟಿದ್ದೇನೆ. ಅದೇ 'ಟು ಡೈ ಆರ್ ನಾಟ್ ಟು ಡೈ'. ■

**ದಿನಕ್ಕೊಬ್ಬರಿಗೆ ನಾಲ್ಕಕ್ಷರ ಕನ್ನಡ ಕಲಿಕೆ**
**ಅದುವೆ ಕನ್ನಡ ತಾಯಿಗೆ ನಮ್ಮ ಪುಷ್ಪ ಮಾಲಿಕೆ**

# ಮನಸೆಂಬ ಕೋತಿ...... !

● ಎಚ್. ಗೋಪಾಲಕೃಷ್ಣ

ಬೆಳಿಗ್ಗೆ ವಾಕಿಂಗ್ ಮುಗಿಸಿದೆ. ಮನೇಗೆ ಬಂದು ಚೀಲ ಹಿಡಿದು ಹಾಲು ತರಲು ಹೋದೆ. ಹೊಟೇಲಿನಲ್ಲಿ ಶುಗರ್ ಲೆಸ್ ಕಾಫಿ ಕುಡಿದು ಆಚೆ ಬರಬೇಕಾದರೆ ಹಳೇ ಸಹೋದ್ಯೋಗಿ ಒಬ್ಬರು ಸಿಕ್ಕಿದರು. ನಾನು ರಿಟೈರ್ ಆದ ನಾಲ್ಕು ವರ್ಷಕ್ಕೆ ರಿಟೈರ್ ಆದವರು. ಸುಮಾರು ಹೊತ್ತು ಅವರಿಗೆ ಸರ್ವಿಸಿನಲ್ಲಿದ್ದಾಗ ಆದ ಅನ್ಯಾ0ಯ, ಮೋಸ, ವಂಚನೆ ಇವುಗಳ ಬಗ್ಗೆ ಹೇಳುತ್ತಾ ಹೋದರು.ಐದಾರು ಸಲ ಕೈಗಡಿಯಾರ ನೋಡಿಕೊಂಡರೂ ಅವರಿಗೆ ಅರ್ಥವಾದ ಹಾಗೆ ಕಾಣಿಸಲಿಲ್ಲ. ಜೇಬಿಂದ ಮೊಬೈಲ್ ತೆಗೆದೆ, ಕಿವಿ ಹತ್ರ ಹಿಡಿದೆ. ಹಲೋ ಹಲೋ ಅಂದೆ. ಆಯಿತು ಬರ್ತಿದೀನಿ, ಇನ್ನು ಹತ್ತು ನಿಮಿಷ ನಿನ್ನೆದುರು ಇರ್ತೀನಿ ಅಂತ ಹೇಳಿ ಇವರ ಕಡೆ ತಿರುಗಿದೆ. ಮನೇಲಿ ಹಾಲಿಗೆ ಕಾಯ್ತಿದಾರೆ, ಅವಳಿ ಕೂಸುಗಳಿಗೆ ನಂದಿನಿ ಹಾಲು ಕುಡಿಸೋದು, ಅದನ್ನು ಬಿಟ್ಟು ಬೇರೆ ಹಾಲು ಕುಡಿಸಿದರೆ ಅವಕ್ಕೆ ಮೈ ತಡಿಯೋಲ್ಲ ಅಂತ ಹೇಳ್ತಾ ಅವರು ಮತ್ತೆ ಮಾತನಾಡಲು ಆಸ್ಪದ ಕೊಡದೇ ದುಡುದುಡ ಓಡಿಬಿಟ್ಟೆ. ಹಾಗೆ ಓಡಿದವನು ಮನೆಗೆ ಬರುವ ಹೊತ್ತಿಗೆ ತಡವಾಗಿತ್ತು. ಮನೆ ಗೇಟು ತೆರೆದರೆ ಬಾಗಿಲ ಮುಂದೆ ಒಂದು ಜೊತೆ ಹೊಸಾ ಶೂ ಕಂಡಿತು. ಇಷ್ಟು ಬೇಗ ಅದ್ಯಾರು ಬಂದರು ಮನೇಗೆ ಎಂದು ಯೋಚಿಸುತ್ತಲೇ ಹೊರಗೇ ಕೂತು ಶೂ ಬಿಚ್ಚಿದೆ, ಸಾಕ್ಸ ತೆಗೆ0ಯುತ್ತಾ ಒಳಗಿಂದ ಏನಾದರೂ ಮಾತು ಕೇಳಿಸುತ್ತಾ ಅಂತ ಕಿವಿ ನಿಮಿರಿಸಿದೆ. ಏನೂ ಶಬ್ದ ಕೇಳಿಸಲಿಲ್ಲ.ಯಾರಾದರೂ ಹೆಂಗಸರು ವಾಕಿಂಗ್ ಮುಗಿಸಿಕೊಂಡು ಬಂದಿದಾರಾ, ಅಡಿಗೆ ಮನೇಲಿ ಹರಟೆ ಹೊಡೀತಿದಾರಾ ಅಂತ ಯೋಚಿಸುತ್ತಾ ಮೆಲ್ಲಗೆ ಒಳ ಹಣಿಕಿದೆ.

ನಮ್ಮ ಏರಿಯಾಗೆ ಈಗೊಂದು ಮೂರುವರ್ಷದ ಹಿಂದೆ ತಮಿಳುನಾಡಿನ ಚೆನ್ನೈನಿಂದ ಬಂದು ನೆಲೆಸಿರುವ ಸುಂದರ ರಾಮನ್ ಕಂಡರು. ಚೆನ್ನೈ ಕಾರ್ಪೊರೇಷನ್ ನಲ್ಲಿ ಉದ್ಯೋಗಿಯಾಗಿದ್ದ ಇವರು ಈಗ ಇಲ್ಲಿ ತಮ್ಮ ಮಗನೊಂದಿಗೆ ಇದ್ದಾರೆ. ಇವರು ನನಗೆ ವಾಕಿಂಗ್ ನಲ್ಲಿ ಸಿಗುತ್ತಾರೆ, ರಸ್ತೆ0ಯಲ್ಲಿ ಸಿಗುತ್ತಾರೆ. ಸಿಕ್ಕಾಗಲೆಲ್ಲ ಎರಡೂ ಕೈ ಜೋಡಿಸಿ ಗುಡ್ ಮಾರ್ನಿಂಗ್ ಎನ್ನುತ್ತಾರೆ... ತಮಿಳಿನಲ್ಲಿ ಮಾತು ಆಡಿಸುತ್ತಾರೆ ಮತ್ತು ನನ್ನ ತಮಿಳು ಕೇಳಿ ಬಿದ್ದುಬಿದ್ದು ನಗುತ್ತಾರೆ. ಎನ್ನಾ ಚಾರ್ ನೀ ಇವುಳ ಬರ್ಸ ಆಚಿ ಬೆಂಗಳೂರ್ಲೀ ಇರ್ಕೆ ತಮಿಳ್ ವರಾದಾ ಅಂತ ಮತ್ತೆ ಮತ್ತೆ ನಗ್ತಾರೆ. ಅವರು ನಗ್ತಾರೆ ಅಂದರೆ ನನಗೆ ಕೋತಿಗೆ ಹೆಂಡ ಕುಡಿಸಿದ ಹಾಗೇ ಆಗುತ್ತೆ. ಇನ್ನೂ ಹೆಚ್ಚೆಚ್ಚು ತಮಿಳನ್ನ ಕೊಲೆ ಮಾಡ್ತೀನಿ! ಇದು ಅಪ್ಪಡಿ ಇರಕೂಟ್ಟಂ....

ತಿರುಪತಿಗೆ ಹೋಗಿದ್ದೆ ಎಂದು ಮೂರು ತಿಂಗಳ ಹಿಂದೆ ಲಾಡು ಪ್ರಸಾದ ತಂದು ಕೊಟ್ಟಿದ್ದರು. ಪ್ರತಿ ವರ್ಷ ಅವರ ಹುಟ್ಟಿದ ದಿವಸದಂದು ಪಾರ್ಕಿಗೆ ಬಂದು ಅಲ್ಲಿ ವಾಕಿಂಗ್ ಮಾಡುತ್ತಿರುವ ಎಲ್ಲರಿಗೂ ಚಾಕಲೇಟು ಕೊಟ್ಟು ಕೈ ಜೋಡಿಸುತ್ತಾರೆ....ಇವತ್ತು ಯಾಕೆ ಬಂದಿದ್ದಾರೆ ಇಷ್ಟು ಬೇಗ ಅಂತ ಯೋಚನೆ

ಶುರುವಾಯಿತು ತಲೆ೦ುಲ್ಲಿ.

ಮನೇಲಿ ಯಾರಿಗೋ ಹುಷಾರಿಲ್ಲ, ಸ್ವಲ್ಪ ದುಡ್ಡು ಬೇಕಿತ್ತು ಅಂತ ಬಂದಿರಬಹುದೇ? ಇಷ್ಟು ಬೆಳಿಗ್ಗೆ ಬೆಳಿಗ್ಗೆ ಮನೇಗೆ ಬಂದು ಕಾಯೋದಕ್ಕೆ ಅವರಿಗೆ ಇನ್ನೇನು ಕಾರಣ ಇರಬಹುದು ಅಂತ ಮೆದುಳು ಓಡಿತು. ದುಡ್ಡು ಕೇಳೋದಿಕ್ಕೆಯೇ ಬಂದಿದಾರೆ ಅಂತ ಮನಸೂ ಒತ್ತಿ ಒತ್ತಿ ಹೇಳಿತು.

ದುಡ್ಡು ಕೇಳೋದಿಕ್ಕೆ ಬಂದಿದ್ದರೆ ಅದೇನು ಕಾರಣ ಹೇಳಬಹುದು? ಮನೇಲಿ ಅಕ್ಕಿ ಇಲ್ಲ, ಸಕ್ಕರೆ ಇಲ್ಲ ಅಂದರೆ ನಮ್ಮ ಮನೆಯಿಂದಲೇ ಅಕ್ಕಿ ಸಕ್ಕರೆ ಕೊಟ್ಟುಬಿಡಬಹುದು. ಆದರೆ ಅಷ್ಟು ಸಣ್ಣ ಸಹಾ೦ುಕ್ಕೆ ಇಷ್ಟು ಬೆಳಿಗ್ಗೆ ಯಾರಾದರೂ ಬರೋದು ಉಂಟೇ?

ಮನೇಲಿ ಯಾರನ್ನಾದರೂ ಆಸ್ಪತ್ರೆಗೆ ಸೇರಿಸಿದ್ದೀವಿ, ಇಲ್ಲಿ ನಮಗೆ ಯಾರೂ ಹೆಚ್ಚು ಪರಿಚ೦ು ಇಲ್ಲ. ಸ್ವಲ್ಪ ಸಹಾ೦ುಮಾಡಿ ಅಂತ ಕೇಳಬಹುದೇ?......

ಇದೇ ನಿಜವಾದ ಕಾರಣ ಇರಬೇಕು. ಮಸಲ ಅವರು ಇದೇ ಕಾರಣ ಹೇಳಿ ಹಣ ಸಹಾ೦ು ಕೇಳಿದರೆ ಎಷ್ಟು ಕೊಡಬಹುದು?

ಒಂದು ಹತ್ತುಸಾವಿರ? ಹತ್ತುಸಾವಿರ ಕೊಟ್ಟು ಅದು ಹೇಗೆ ವಸೂಲಿ ಮಾಡೋದು? ಇನ್ನೂ ಹೆಚ್ಚಿನ ಪರಿಚ೦ುದವರೂ ಅಲ್ಲ. ಐದು ಸಾವಿರ ಕೊಟ್ಟರೆ.....? ಅದೂ ಜಾಸ್ತಿನೇ ಅಲ್ಲವಾ? ಐದು ಸಾವಿರ ಅಂದರೆ ನನ್ನ ಐದು ತಿಂಗಳ ಪೆನ್ಶನ್ನು.....

ಹಾಗಿದ್ದರೆ ಎಷ್ಟು ಕೊಟ್ಟು ಸಾಗಹಾಕಬಹುದು? ಸಾವಿರ ಕೊಡಲೇ? ಉಹೂಂ ಅಂದಿತು ಮನಸು. ಐದು ನೂರು.... ಅದಕ್ಕೂ ಉಹೂಂ ಅಂದಿತು ಮನಸು.... ಹೋದ ವರ್ಷ ಇವರಿಗೆ ವ೦ುಸ್ಸು ಎಷ್ಟು ಆಗಿತ್ತು.....

ಹಾಲು ತಂದ ಮೇಲೆ ಜೇಬಲ್ಲಿ ಐವತ್ತು ರೂಪಾಯಿ ಇದೆ. ಅದನ್ನು ಕೊಟ್ಟು ಇಷ್ಟೇ ಇರೋದು, ನಾನು ರಿಟೈರು, ಬೇರೆ ಕಾಸು ನನಗೆ ಸಿಗುಲ್ಲ, ದ೦ುವಿಟ್ಟು ಬೇರೆ ಇನ್ಯಾರನ್ನ ಕೇಳಿ ಪ್ಲೀಸ್ ಎಂದು ಹೇಳುವುದು ಎಂದು ಮನಸಿನಲ್ಲೇ ನಿರ್ಧರಿಸಿದೆ.

ಮನೆ ಒಳಗೆ ಬಂದೆ. ನಮಸ್ಕಾರ.... ಅಂದೆ. ಎದ್ದುನಿಂತು ಎರಡೂ ಕೈಮುಗಿದರು. ಆರೋಗ್ಯವಾಗಿದೀರಾ... ಅಂತ ಕೇಳ್ತಾ ಅಡಿಗೆ ಮನೆ ಕಡೆ ಕಣ್ಣು ಹಾಯಿಸಿದೆ.

ಹೆಂಡತಿ ಕಾಫಿ ಲೋಟ ಹಿಡಿದು ಆಚೆ ಬಂದಳು. ಯಾಕೆ ಇಷ್ಟೊತ್ತು? ಅವರು ತುಂಬಾ ಹೊತ್ತಿಂದ ನಿಮಗೆ ಕಾಯ್ತಿದಾರೆ.... ಅಂತ ಹೇಳ್ತಾ ಅವರಿಗೆ ಕಾಫಿ ಕೊಟ್ಟಳು.

ಕಾಫಿ ಕುಡಿದರು. ಎದ್ದುನಿಂತು ಕೈಕುಲುಕಿದರು. ಇನ್ನೇನು ಈಗ ದುಡ್ಡು ಕೇಳ್ತಾರೆ, ಜೇಬಿಂದ ಐವತ್ತು ತೆಗೆದು ಕೊಟ್ಟರೆ ಸರಿ ಅಂತ ಜೇಬಿನಲ್ಲಿ ನೋಟು ಇರುವುದು ಖಾತ್ರಿ ಮಾಡಿಕೊಂಡೆ.

ಇವತ್ತು ನನ್ನ 92ನೇ ಹುಟ್ಟಿದ ಹಬ್ಬ ಎಂದು ಮತ್ತೆ ಕೈಕುಲುಕಿದರು. ಕೈಚೀಲ ತೆಗೆದು ಅದರಿಂದ ಎರಡು ದೊಡ್ಡ ಕಾಡ್ ಬರೀಸ್ ಚಾಕ್ಲೆಟ್ ಆಚೆ ತೆಗೆದರು.

ನನ್ನ ಮುಖ ಒಂದೂವರೆ ಕೇಜಿ ಹರಳೆಣ್ಣೆ ಹೀರಿದ ಹಾಗಾಗಿತ್ತು. ನನಗೋ ಅಲ್ಲೇ ಎಲ್ಲಾದರೂ ಚಿಕ್ಕ ಬಿಲ ಕಾಣಿಸಿದರೆ ಅದರಲ್ಲಿ ನುಗ್ಗಿ ಮುಖ ಮರೆಸಿಕೋಬೇಕು ಅನಿಸಿತ್ತು. ಹಾಳಾದ ಮನೆಗೆ ಸಿಮೆಂಟು ಮಾಡಿಸಿಬಿಟ್ಟಿದೀನಿ. ಅಲ್ಲೆಲ್ಲೂ ಬಿಲ ಕಾಣಿಸಲಿಲ್ಲ.

ಅಮ್ಮಾ ಬನ್ನಿ ಅಂತ ನನ್ನಾಕೆಯನ್ನು ಕರೆದರು. ನನ್ನ ಪಕ್ಕ ನಿಲ್ಲಿಸಿ ಇಬ್ಬರ ಕೈಗೂ ಚಾಕಲೇಟಿನ ದೊಡ್ಡ ಪ್ಯಾಕೆಟ್ ಇಟ್ಟು ಮತ್ತೆ ಕೈಮುಗಿದರು. ನಂತರ ಅವರು ಮುಖದ ತುಂಬಾ ನಗೆ ಚೆಲ್ಲಿದರು.

ಪೆಚ್ಚು ಪೆಚ್ಚಾಗಿ ಸಾರ್, ನೂರು ವರುಷ ಹೀಗೇ ಆರೋಗ್ಯದಿಂದ ಬಾಳಿ ಎಂದು ಹಾರೈಸಿದೆ...

ನನ್ನ ಬಗ್ಗೆ ಛೇ ಎಂಥಾ ಮನುಷ್ಯ ನಾನು ಅನಿಸಿತು. ಅವರು ಹೋದ ಎಷ್ಟೋ ಸಮಯದ ನಂತರ ಅದೇನು ಅಂತಃಕರಣ ಈ ಹಿರಿಯರದ್ದು ಅನಿಸಿತು. ಯಾಕೆ ಮನಸೆಂಬ ಕೋತಿ ಹೀಗಾಡಿತು, ಯಾಕೆ ನನ್ನ ಬುದ್ಧಿ ಹೀಗೆ ಓಡಿತು ಅಂತ ಈವರೆಗೂ ಅರ್ಥವೇ ಆಗಿಲ್ಲ ! ■

---

**ಕೊರವಂಜಿಯಿಂದ**



—ನೀರು ಕಾದಿತ್ತಿಲ್ಲ ಸ್ನಾನಕ್ಕೆ ಅಂತ ರೇಗಿದರೆ—ಹಳೇ ಸೀರೆ ಉಟ್ಟುಕೊಂಡೇ ಗೌರೀಹಬ್ಬ ಮಾಡಿದರೆ—ಹಸೀ ಸೌದೆ ಹೇಗೆ ಉರಿಯುತ್ತೆ ಅಂದ್ರೆ— ಬರೀ—ಹೊಟ್ಟೆ ಉರಿಯುತ್ತೆ—ಅಷ್ಟೆ !!

# ಗಿಡ್ಡ ಹೆಸರು

● ಜಿ.ವಿ.ನಿರ್ಮಲ

ಮನುಷ್ಯರ ಹೆಸರುಗಳನ್ನು ಚಿಕ್ಕದು ಮಾಡಿ ಅಡ್ಡ ಹೆಸರಿಟ್ಟು ಕರೆಯುವುದು ಸಾಮಾನ್ಯ. ಮನುಷ್ಯರಿಗಲ್ಲದಿದ್ರೆ? ಅವಕ್ಕೆ ಗಿಡ್ಡ ಹೆಸರು ಅನ್ನೋಣವೇ? ಅದು ಪ್ರಾಣಿಗಳಿಗಿಟ್ಟ ಮುದ್ದಿನ ಹೆಸರಾ? ಉಹುಂ, ಅದೂ ಅಲ್ಲ. ಈ ಗಿಡ್ಡ ಹೆಸರು ಗಿಡ್ಡ ಮಾತ್ರವಲ್ಲ ಗುಪ್ತ ಹೆಸರೂ ಆದೀತು. ಮುದ್ದಿನ ಹೆಸರೂ ಆದೀತು. ಏನಿದು ಕುತೂಹಲ ಹೆಚ್ಚಾಗುತ್ತಿದೆಯಲ್ಲ! ಅದು ರಹಸ್ಯ ಹೆಸರೇ? ರಾಷ್ಟ್ರಮಟ್ಟದ ಕೆಲವು ಯೋಜನೆಗಳಿಗೂ ಅನ್ವರ್ಥ ಹೆಸರುಗಳಿರುತ್ತವೆ. ಅವುಗಳನ್ನು ಗಿಡ್ಡವಾಗಿ 'ಮಿಷನ್ ಚಂದ್ರಯಾನ' ಇತ್ಯಾದಿ ಹೇಳುವುದಿದೆ. ನಮ್ಮ ಕರ್ನಾಟಕದಲ್ಲಂತೂ ಹಲವಾರು ಭಾಗ್ಯಗಳ ಹೆಸರು ಕೇಳಿಬರುತ್ತವೆ. ನಾನು ಹೇಳಲು ಹೊರಟಿರುವುದು ಇವ್ಯಾವವೂ ಅಲ್ಲ. ಹಾಗಾದ್ರೆ ಯಾವುದಕ್ಕೆ 'ಗಿಡ್ಡ ಹೆಸರು' ಎನ್ನುವ ನವೀನ ನಾಮಕರಣ? ನನ್ನ ಪರಿಭಾಷೆಯ 'ಗಿಡ್ಡ ಹೆಸರು' ಯಾವುದು? ವಿವರ ಇಲ್ಲಿದೆ ಓದಿ.

ಒಮ್ಮೆ ನನ್ನ ಸಮೀಪ ಸಂಬಂಧಿಕರೊಬ್ಬರ ಮನೆಯಲ್ಲಿ ಬಹಳ ಹಿಂದೆ ನಡೆದ ಸಂಗತಿ. ಮನೆಯ ಯಜಮಾನ್ರನ್ನು ಭೇಟಿ ಮಾಡಕ್ಕೆ ಅವರ ಆತ್ಮೀಯ ಸ್ನೇಹಿತರು ಬಂದ್ರು. ಮನೆಯ ಮಗಳು 'ಬನ್ನಿ ಮಾವ, ಕೂತ್ಕೊಳ್ಳಿ' ಎಂದದ್ದೂ ಆಯಿತು. ಪಡಸಾಲೆಯಲ್ಲಿದ್ದ ಉಯ್ಯಾಲೆಯ ಮೇಲೆ ಕೂತ ಸ್ನೇಹಿತರು 'ಅಮ್ಮಣ್ಣಿ, ಒಂದು ಲೋಟ ನೀರು ಕೊಡು ತಾಯಿ' ಎಂದರು. ನೀರು ಕುಡಿದದ್ದಾಯಿತು; ದಣಿವಾರಿಸಿಕೊಂಡದ್ದೂ ಆಯಿತು. ಸ್ನೇಹಿತನ ಪತ್ತೆ ಇಲ್ಲ. 'ತಾಯಿ ಗುಂಡಣ್ಣ ಎಲ್ಹೋದ? ಕಾಣ್ತಾನೇ ಇಲ್ವಲ್ಲಾ?' ಎಂದಾಗ ಅಲ್ಲಿಗೆ ಬಂದ ಚಿಕ್ಕ ಮಗಳು 'ಅಪ್ಪಾಜಿ ಲಂಡನ್‌ಗೆ ಹೋಗಿದ್ದಾರೆ. ಇನ್ನೇನು ಬಂದುಬಿಡ್ತಾರೆ' ಅಂತ ಹೇಳಿದಾಗ ಸ್ನೇಹಿತರಿಗೆ ತಬ್ಬಿಬ್ಬಾಯಿತು. 'ಏನು ಲಂಡನ್‌ಗಾ? ಏನ್ ಹೇಳ್ತಿದ್ದೀ ತಾಯಿ. ಲಂಡನ್ ಎಲ್ಲಿ? ನಾವೆಲ್ಲಿ? ನೀ ಹೇಳಿದ್ದನ್ನ ನಾನು ನಂಬಬೇಕಾ? ತಮಾಷೆ ಮಾಡ್ತಿದೀಯಾ ಅಮ್ಮಣ್ಣಿ?' ಅಂದಾಗ ಅವಳು ಮುಸಿಮುಸಿ ನಕ್ಕಳು. ಏನೂ ಹೇಳದೆ ಒಳಗೆ ಓಡಿದಳು. ಅಷ್ಟರಲ್ಲಿ ಗುಂಡಣ್ಣ ಟವಲ್ ಸುತ್ತಿಕೊಂಡು ಪ್ರತ್ಯಕ್ಷನಾದ. ಸ್ನೇಹಿತನ ಗೊಂದಲ ನೋಡಿ ಅವನಿಗೂ ನಗು ಉಕ್ಕಿ ಬಂತು. 'ಅಯ್ಯೋ, ನಾನು ಲಂಡನ್‌ಗೂ ಹೋಗಿಲ್ಲ. ಪ್ಯಾರಿಸ್‌ಗೂ ಹೋಗಿಲ್ಲ ಕಣೋ. ನಾನು ಹೋಗಿದ್ದು ಪಾಯಿಖಾನೆಗೆ. ನಮ್ಮ ಮನೆಯಲ್ಲಿ ಎಲ್ಲರೂ ಅದಕ್ಕೆ ಇಟ್ಟಿರುವ ಗಿಡ್ಡ ಹೆಸರು 'ಲಂಡನ್'. ನಿನ್ನ ಮುಂದೆ ಆ ವಿಷಯ ಬಿಡಿಸಿ ಹೇಳಕ್ಕೆ ಆ ಹೆಣ್ಣಿಗೆ ಸಂಕೋಚವಾಯಿತು' ಎಂದೊಡನೆ ಸ್ನೇಹಿತನಿಗೂ ನಗು ಬಂತು. ಆಗಿನ ಕಾಲದಲ್ಲಿ ಪಾಯಿಖಾನೆ ಮನೆಯಿಂದ ಬಹುದೂರ ಇದ್ದುದರಿಂದಲೋ, ನಮ್ಮನ್ನು ಆಳುತ್ತಿದ್ದ ಬ್ರಿಟಿಷರ ಮೇಲಿನ ಕೋಪದಿಂದಲೋ ಮನೆಯವರೆಲ್ಲ ಅದಕ್ಕೆ 'ಲಂಡನ್' ಎಂದೇ ಹೆಸರಿಸಿದ್ದರು.

ಹೀಗೆ ಕೇವಲ ಮನುಷ್ಯರಿಗಲ್ಲದೆ ನಿರ್ಜೀವ ವಸ್ತುಗಳಿಗೂ ಗಿಡ್ಡ ಹೆಸರುಗಳಟ್ಟಿರುವ ಹಲವು ಉದಾಹರಣೆಗಳಿವೆ. ಮತ್ತೊಂದು ಸ್ವಾರಸ್ಯಕರವಾದ ಸಂಗತಿ. ಇದು ಕೂಡ ಹಳೆಯ ಪುರಾಣ. ನಮ್ಮ ಅಜ್ಜಿಯ ಸಂಬಂಧಿಕರೊಬ್ಬರು ಪರವೂರಿನ ನೆಂಟರ

ಮನೆಗೆ ಹೋಗಿಳಿದರು. ಮಡಿವಂತರು. ಸ್ನಾನ ಊಟಗಳಾದವು. ಆ ಮನೆಯ ಮಕ್ಕಳಿಗೆ ಚಕ್ಕುಲಿ, ಕೋಡುಬಳೆ, ರವೆ ಉಂಡೆಗಳನ್ನು ಹಂಚಿದ್ದೂ ಆಯಿತು. ತಿಂಡಿಯ ಆಸೆಗೆ ಅವರ ಬಳಿ ಕುಳಿತ ಮಕ್ಕಳಿಗೆ ಮತ್ತೊಂದು ಪುಟ್ಟ ಗಂಟು ಕಾಣಿಸಿತು. 'ಅಜ್ಜಿ, ಆ ಗಂಟಿನಲ್ಲೇನಿದೆ? ತೆಗೆಯಲೇ ಇಲ್ಲ.' ಎಂದು ಚೀಲದಲ್ಲಿದ್ದ ಪುಟ್ಟ ಗಂಟನ್ನು ತೋರಿಸಿದವು. ಆ ಗಂಟಿನಲ್ಲಿ ಮುಂದಿನ ಊರಿನಲ್ಲಿದ್ದ ತಮ್ಮ ಪ್ರೀತಿಯ ಮೊಮ್ಮಗನಿಗೆ ಕೆಲವೇ ಕೆಲವು ಕಜ್ಜಾಯಗಳನ್ನು ತಂದಿದ್ದರು ಆ ಅಜ್ಜಿ. ಅದನ್ನು ಇಲ್ಲಿ ಬಿಚ್ಚಿದರೆ ಏನೂ ಉಳಿಯದು. ಆದರೆ ಈ ಮಕ್ಕಳಿಗೆ ಹಾಗೆ ಹೇಳಿದರೆ ನೊಂದುಕೊಳ್ಳುತ್ತವೆ ಎಂದು ಯೋಚಿಸಿದ ಅಜ್ಜಮ್ಮ 'ಮಕ್ಕಳಾ ಅದರಲ್ಲಿ ನನ್ನ ದೇವರ ಪೆಟ್ಟಿಗೆ ಇದೆ. ಅದನ್ನು ಈಗ ಬಿಚ್ಚುವಂತಿಲ್ಲ.' ಎಂದು ಒಂದು ಸುಳ್ಳು ಹೇಳಿಯೇ ಬಿಟ್ಟರು. ಮಕ್ಕಳು ನಂಬಿ ಜಾಗ ಖಾಲಿ ಮಾಡಿದರು. ಆದರೆ ಈಗಲೂ ನಮ್ಮಜ್ಜಿಯ ಮನೆಯಲ್ಲಿ ಕಜ್ಜಾಯದ ಗಿಡ್ಡ ಹೆಸರು 'ದೇವರು' ಎಂದೇ ಆಗಿದೆ. ಎಂತಹ ವಿಚಿತ್ರವಲ್ಲವೇ?

ನಮ್ಮಜ್ಜಿಯ ಕಾಲದ ಮತ್ತೊಂದು ಗಿಡ್ಡ ಹೆಸರಿನ ಕಥೆ ಹೀಗಿದೆ. ನಮ್ಮ ಮನೆಯ ಬಳಿ ಒಂದು ಚಿಕ್ಕ 'ಡಬ್ಬ ಅಂಗಡಿ' ಇತ್ತು. ಅಲ್ಲಿ ವ್ಯಾಪಾರ ಮಾಡುತ್ತಿದ್ದವ ಬಹಳ ಪಾಪದ ಮನುಷ್ಯ. ಸ್ವಲ್ಪ ಮೊದ್ದು. ಏನೋ ಕಡಲೇ ಬೀಜ, ಹುರಿಗಾಳು ಇತ್ಯಾದಿ ಆ ಕಾಲದ ತಿಂಡಿಗಳನ್ನು ಮಾರಿ, ಹೇಗೋ ಜೀವನ ಸಾಗಿಸುತ್ತಿದ್ದ. ಅವನಿಗೆ ಕೆಲವರು ಇಟ್ಟ ಅಡ್ಡ ಹೆಸರು ಗುಗ್ಗು. ಅವನ ಎದುರಿಗೆ ಹಾಗೆ ಕರೆಯುತ್ತಿರಲಿಲ್ಲವೇನೋ? ಅವನ ಅಂಗಡಿಯಲ್ಲಿ ಬಹಳ ರುಚಿಯಾದ, ಚಿಕ್ಕಚಿಕ್ಕ ಹಾಲುಖೋವಾ ಸಿಗುತ್ತಿತ್ತು. ಮನೆಯ ಮಕ್ಕಳಿಗೆಲ್ಲಾ ಅದು ಬಹಳ ಇಷ್ಟ. ಮನೆಯಲ್ಲಿ ದೊಡ್ಡವರು ಆ ಕಡೆ ಹೋದರೆ ನಮಗೆ ಹಾಲುಖೋವಾ ತರುವಂತೆ ಗೋಗರೆಯುತ್ತಿದ್ದೆವು. ಗುಗ್ಗು ಅಂಗಡಿಯ ಹಾಲುಖೋವಾ ಎನ್ನುವುದಕ್ಕೆ ಯಾರೋ 'ಗುಗ್ಗುಶ' ಎಂದು ಗಿಡ್ಡಹೆಸರಿಟ್ಟೇ ಬಿಟ್ಟರು. ಬಹಳ ವರ್ಷಗಳ ನಂತರವೂ ನಮ್ಮ ಮನೆಯಲ್ಲಿ ಆ ಹಾಲುಖೋವಾಗೆ 'ಗುಗ್ಗುಶ' ಎನ್ನುವ ಹೆಸರೇ ಚಾಲ್ತಿಯಲ್ಲಿತ್ತು. ಈಗ ಬಿಡಿ ಗುಗ್ಗು, ಗುಗ್ಗುಶ ಎರಡೂ ಗತಕಾಲದ ನೆನಪು.

ಎಲ್ಲರಿಗೂ ಬಹಳ ಕಾಲದಿಂದ ಚಿರಪರಿಚಿತ ಗಿಡ್ಡ ಹೆಸರು ಖಾರದ ಕಡ್ಲೇಕಾಯಿನ ಒಂದು ವಿಧಕ್ಕೆ 'ಕಾಂಗ್ರೆಸ್' ಕಡ್ಲೇಕಾಯಿ ಎನ್ನುವುದು. ಇದು ಯಾರು ಇಟ್ಟ ಹೆಸರೋ? ಆದ್ರೆ ಬೆಂಗಳೂರಿನಲ್ಲಿರುವವರಿಗೆ ಇದರ ಹೆಸರೂ ಗೊತ್ತು. ಅದರ ರುಚಿಯೂ ಮೆಚ್ಚು. ನೋಡಿದ್ರಾ ನನ್ನ ಪರಿಭಾಷೆಯಲ್ಲಿ ಗಿಡ್ಡ ಹೆಸರೇನೆಂದು ತಿಳೀತಾ? ■

---

ಜನ್ಮಜನ್ಮಾಂತರಕೆ ಬನವಾಸಿ ನಾಡು

ನಂದನದಿ ಮರಿದುಂಬಿಯನ್ನಾಗಿ ಮಾಡು

ಎಂದು ಹಾಡಿದ ಆ ನಿನ್ನ ಹೃದಯದೊಲುಮೆ

ಇಂದಿಗೂ ನಮ್ಮ ನಾಡಿನ ಮಹಾ ಮಹಿಮೆ

– ದಿನಕರ ದೇಸಾಯಿ

# ಮಾಡೆಲ್ ರೈಲ್ವೆ ಕಾಲೋನಿ

● ಇ.ಆರ್. ರಾಮಚಂದ್ರನ್

ಅಜ್ಜಿ ಭಾನುವಾರದ ಆಂದೋಳನ ದಿನಪತ್ರಿಕೆಯನ್ನು ತಿರುವಿ ಹಾಕುತ್ತಿದ್ದರು.

'ಏನಜ್ಜಿ! ಭಾನುವಾರ ಆರಾಮಾನಾ? ಇವತ್ತು ನಿನ್ನ ಹರಿಕಥೆ ಮತ್ತು ಸೋಷಿಯಲ್ ಮೀಡಿಯಾಗೆ ರಜಾನಾ?

ವಿರಾಟ್ ಕೋಹ್ಲಿ ರವಿ ಶಾಸ್ತ್ರಿಗೆ ಮಾಡೋ ಹಾಗೆ ಅಜ್ಜಿ ನನ್ನ ಮಾತನ್ನು ಮೌನವಾಗಿ ತಿರಸ್ಕರಿಸಿದರು. ಅಜ್ಜಿ ಮೂಡ್ ಟ್ರಂಪ್ ಮೂಡ್ ತರಹ..

ಅದು ಏನಾಗುತ್ತೋಂತ ದೇವ್ರಿಗೂ ಗೊತ್ತಿರಲ್ಲ..

ಇದ್ದಕ್ಕಿದಂತೆ ಶುರು ಮಾಡಿದರು.

'ಅಲ್ವೋ! ಎಷ್ಟು ಬಿಲ್ಡಿಂಗ್‌ಗಳು ಕಟ್ಟಿದಾರೋ! ಲೆಕ್ಕವೇ ಇಲ್ಲ. ಮೇಲೆ ನೋಡ್ತಾ ಹೋದ್ರೆ ಕತ್ತು ನೋವು ಬರೋದು ಖಂಡಿತ'.

'ಹೌದಜ್ಜಿ.. ಎಲ್ಲೆಲ್ಲೂ ಮಾಲ್ಗಳು, ಅಪಾರ್ಟ್‌ಮೆಂಟುಗಳು, ಕಂಪ್ಯೂಟರ್ ಕಂಪನಿಗಳೇ..'

'ನನ್ನ ಕೇಳಿದ್ರೆ ಯಾರು ಎಲ್ಲಿ ಕೆಲಸ ಮಾಡ್ತಾರೋ ಅವ್ರಿಗೆ ಆ ಕಂಪನಿಯವರೇ ಮನೇ ಕಟ್ಟಿ ಕೊಟ್ರೆ ಒಳ್ಳೇದು.. ಅವರ ಕೆಲಸ ಮತ್ತು ಮನೆ ಟೇಸ್ಟು ಎರಡೂ ಕಡೆ ಹೊಂದುತ್ತೆ ನೋಡು.'

ಅಜ್ಜಿ ಮಾತನಾಡೋದು ಎಷ್ಟೋ ಸಲ ಕುಲ್ದೀಪ್ ಯಾಧವ್ ಸ್ಪಿನ್ ತರಹ.. ಬಾಲು ಕಣ್ಣಿಗೆ ಚೆನ್ನಾಗಿ ಕಾಣಿಸುತ್ತೆ.. ಆದ್ರೆ ಆಡಕ್ಕೆ ಹೋದ್ರೆ ಕ್ಲೀ ಬೋಲ್ಡ್!

'ಸ್ವಲ್ಪ ವಿವರವಾಗಿ ಹೇಳು ಅಜ್ಜಿ. ನೀನು ಹೇಳೋದು ಒಗಟೋ ತೊಗಟೋ ಅರ್ಥವಾಗ್ತಿಲ್ಲ'.

'ಹೌದು.. ಮರ್ತೇ ಹೋಗಿತ್ತು ನೋಡು.. ನಿನಗೆ ಹೇಳುವಾಗ ಮಗುಜೊತೆ ಮಾತಾಡೋ ಹಾಗೆ ಎಲ್ಲಾ ಸರಳವಾಗಿರ್ಬೇಕು..'

ಕೋಪ ಉಕ್ಕಿಬಂತು. ಹಲ್ಲು ಕಚ್ಚಿಕೊಂಡು ಸುಮ್ಮನಿದ್ದೆ. ಅಜ್ಜೀದು ಶುರುವಾಯಿತು.

'ಎಲ್ಲಿ ಕೆಲಸ ಮಾಡ್ತಾರೋ ಆ ಕಂಪನಿಗಳೇ ಅವ್ರ ಸ್ಟಾಫ್‌ಗೆ ಮನೆ ಮಾಡಿ ಕೊಟ್ರೆ ಜೀವನ ಆರಾಮವಾಗಿ ಇರುತ್ತೆ. ಕೆಲಸದಲ್ಲಿರೋ ಸುವಿಧ ಮನೆಗೂ ತಂದ್ರೆ ಒಳ್ಳೆದು. ಈಗ ಬ್ಯಾಂಕ್ ಕಾಲೋನಿ ಕಟ್ತಾರೆ. ಅಲ್ಲಿರೋವ್ರ ಮನೇಗೆ ಬರೋ ತರಕಾರಿಯವನಿಗೆ, ಹಾಲ್ನವನಿಗೆ ನಿತ್ಯ ದುಡ್ಡು ಕೊಡ್ಬೇಕಾಗುತ್ತೆ. ಏನಾದ್ರು ದುಡ್ಡಿನ ವ್ಯವಹಾರ. ಅದಕ್ಕೆ ಆಫೀಸಿನಲ್ಲಿ ಇರೋ ಹಾಗೆ ಪ್ರತಿ ಮನೇಗೂ ಒಂದು ಕಟಕಟೆ ಕಟ್ಕೊಟ್ರೆ, ಅಲ್ಲಿ ಸೇಫಾಗಿ ಕೂತ್ಕೊಂಡು ಬರೀ ಕೈ ಮಾತ್ರ ಹೊರಗಡೆ ಹಾಕಿ ದುಡ್ಡು ಎಣಿಸಿ ಕೊಡ್ಬಹುದು..'

'ಅಜ್ಜಿ! ಏನು ಹೇಳ್ತಿದೀಯ ನೀನು!'

'ಹಾಗೇ ಅವ್ರ ಮನೇಗೆ ಬಂದು ಹೋಗೋವ್ರು ಬಹಳ ಜನ ಸ್ನೇಹಿತರು,

ಬಂಧು ಬಳಗ ಅಂತ ಇರ್ತಾರೆ.. ಅದಕ್ಕೆ ಬ್ಯಾಂಕಿನ ತರಹ ಟೋಕನ್ ಸಿಸ್ಟಮ್ ಮಾಡಿದ್ರೆ ಬರೋ ಗೆಸ್ಟಗಳು ಟೋಕನ್ ಹಿಡ್ಕೊಂಡು ಕಾಯ್ಬಹುದು'.

'ಅಜ್ಜಿ! ನೀನು ಹೌಸಿಂಗ್ ಸಿಸ್ಟಮ್ನೇ ಬುಡದಿಂದ ಕಿತ್ತು ಬೇರೆ ಮಾಡ್ತಿದೀಯಾ ಅಂತ ನನಗೆ ಅನ್ನಿಸ್ತಾ ಇದೆ.. ಇರ್ಲಿ ಕ್ಯಾರಿ ಆನ್'.

'ಈಗ ನೋಡು ರೈಲ್ವೆ ಕಾಲೋನಿನೇ ತೊಗೊ...ಅದನ್ನು ಎಷ್ಟು ಚೆನ್ನಾಗಿ ಮಾಡ್ಬಹುದು.. ರೈಲ್ವೆ ಸ್ಟೇಷನ್‌ನಲ್ಲಿ ಹಾಕ್ತಾರಲ್ಲ.. ಉದ್ದುದ್ದ ವಾಗಿರೋ ಕಟಕಟೆ.. ಅದನ್ನು ಕಾಲೋನಿ ಸುತ್ತಲೂ ಹಾಕ್ಬಹುದು.. ದೂರದಿಂದಲೇ ಅದು ರೈಲ್ವೆ ಕಾಲೋನಿ ಅಂತ ಗೊತ್ತಾಗುತ್ತೆ. ಮನೆಗೆ ಬೋಗಿಲಿ ಇರುತ್ತಲ್ಲಾ ಹಾಗೆ ಕರಿ ಫ್ಯಾನುಗಳು ಕಬ್ಬಿಣದ ಬಾಕ್ಸ್‌ನಲ್ಲಿದ್ರೆ ಬೀಳೋ ಹೆದರ್ಕೆ ಇರಲ್ಲ. ಜೊತೆಗೆ ಒಂದು ಉದ್ದದ ಬಾಚಣಿಗೆ ಪಕ್ಕದಲ್ಲೇ ಇಟ್ಟಿದ್ರೆ ಚೆನ್ನಾಗಿರುತ್ತೆ. ಫ್ಯಾನು ಕೆಟ್ಹೋದ್ರೆ ತಕ್ಷಣ ಶುರು ಮಾಡ್ಬಹುದು..'

'ಹ ಹ. ಅಜ್ಜಿ ನಿನ್ನ ರೈಲ್ವೆ ಮನೆ ಡಿಸೈನ್ ಸೊಗಸಾಗಿದೆ..'

'ಬೆಡ್‌ರೂಮಿನಲ್ಲಿ ಬಂಕರ್ ತರಹ ಒಂದರ ಮೇಲೆ ಒಂದು ಬೆಡ್ ಇಟ್ರೆ ಜಾಗ ಉಳ್ತಾಯ ಆಗುತ್ತೆ. ಹತ್ತೋದಕ್ಕೆ ಪಕ್ಕದಲ್ಲಿ ಒಂದು ಸಣ್ಣ ಏಣಿ ಬೇಕಷ್ಟೆ.'

'ಇನ್ನೇನು ಮಾಡ್ತಿಯಾ ಆ ಮನೇಗೆ?'

'ಕಿಟಕಿಗಳು... ಈಗ ಎಲ್ಲಾ ಕಿಟಕಿಗಳ ಬಾಗಿಲು ಗಾಳಿಗೆ ಹೊಡಕೊಳ್ತಾ ಇರುತ್ತೆ.. ಬಿರಡೆಗಳು ಲೂಸಾಗಿ ಬಂದು ಬಿಡುತ್ತೆ'.

'ಹೌದು.'

'ರೈಲು ಬೋಗೀಲಿರುತ್ತಲ್ಲಾ ಮೇಲಿಂದ ಕೆಳಗೆ ಬರೋ ಕಬ್ಬಿಣದ ಕಿಟಕಗಳು... ಅದಿದ್ರೆ ಎರಟು ಕೈಯಿಂದ ಮೇಲೆ ಕೆಳಗೆ ಮಾಡ್ಬಹುದು. ಅರ್ಧಕ್ಕೋ, ಮುಕ್ಕಾಲ್ಗೋ ಇಳಿಸ್ಕೋ ಬಹುದು ಗಾಳಿನೂ ಚೆನ್ನಾಗಿ ಬರುತ್ತೆ.. ಗಾಜಿಂದು ಹಾಕಿದ್ರೆ ಹೊರಗಡೆ ಕಾಣಿಸುತ್ತೆ..

'ಗ್ರೇಟ್ ಐಡಿಯಾ ಅಜ್ಜಿ!'

'ನಮ್ಮಲ್ಲಿ ನೀರು ಬಹಳ ವೇಸ್ಟಾಗುತ್ತೆ. ಎಲ್ಲಿ ನೋಡಿದ್ರೆ ಅಲ್ಲಿ ಲೀಕಾಗೋ ನಲ್ಲಿಗಳು.. ರೈಲ್ವೆ ಕಾಲೋನಿ ಪೂರಾ ಬೋಗೀಲಿರೋ ಹಾಗೆ ಅಂಗೈಲಿ ಅಮುಕೋ ಹಾಗೆ ನಲ್ಲಿ ಇರ್ಬೇಕು.. ಅಂಗೈಲಿ ಒತ್ತಿದವನಿಗೆ ನೀರಿನ ಭಾಗ್ಯ..'

'ಬಾತ್ ರೂಮ್ನ ಏನು ಮಾಡ್ತಿಯ?'

'ಎಷ್ಟೋ ಮನೆಯಲ್ಲಿ ಸ್ನಾನಕ್ಕಿರೋ ಮಗ್ ಅನ್ನು ಕೆಲಸದವ್ರು ಹೊಡೆದ್ಬಿಡ್ತಾರೆ ಹಾಗೇ ಟಾಯ್ಲೆಟ್ಗೆ ಉಪಯೋಗಿಸೋದನ್ನು ಕದ್ಬಿಡ್ತಾರಂತೆ.. ಬೋಗಿಲಿರೋ ಹಾಗೆ ಒಂದೊಂದು ಚೈನ್ ಹಾಕಿ ಕಟ್ಬಿಟ್ರೆ ಯಾರೂ ಕದಿಯೋಕೆ ಆಗಲ್ಲ. ಸೇಫ್ ನೋಡು..'

'ಇನ್ನೇನು ಮಾಡ್ತಿಯಾ ಅಜ್ಜಿ?'

ರಾತ್ರಿ ಕತ್ಲೇಲಿ ಓಡಾಡುವಾಗ ನೀಲಿ ಬಣ್ಣದ್ದು ದೀಪ ಹಾಕಿದ್ರೆ ಎಲ್ಲೂ ಆಕ್ಸಿಡೆಂಟು ಆಗ್ದೇ ಇರೋ ಹಾಗೆ ಓಡಾಡ್ಬಹುದು. ಇನ್ನೊಂದು..'

'ಏನದು?'

'ಅಷ್ಟು ಮನೆಗಳಿರೋ ಕಾಲೋನಿಗೆ ಶಾಪಿಂಗ್ ಮಾಡಕ್ಕೆ ಒಂದು ಮಾರ್ಕೆಟ್ ಬೇಕು. ಅವರ್ದೇ ಮಾಲ್ ಮಾಡಿ ಅಲ್ಲಿಗೆ ಹೋಗೋದಕ್ಕೆ ಹಳಿ ಹಾಕಿದ್ರೆ, ಸ್ಟೀಮ್ ಎಂಜಿನ್ನಲ್ಲಿ ಓಡಾಡೋ ಪುಟ್ಟ ರೈಲ್ ಬಂಡಿ ಓಡಿಸ್ಬಹುದು. ಎಲ್ಲಾರ್ಗೂ ಸೌಕರ್ಯ ಆಗುತ್ತೆ'.

'ಅಜ್ಜಿ! ನಿನ್ನ ಹೀಗೆ ಬಿಟ್ರೆ ಕೆಲಸ್ದವನು ಬಂದಾಗ ಅವ್ನು ಕೆಂಪು ಷರ್ಟು ಹಾಕ್ಕೊಂಡು ಬರ್ಬೇಕು, ತೋಳಿಗೆ ಹಿತ್ತಾಳೆ ತೋಳಬಂದಿ, ಒಂದೊಂದು ಕೆಲ್ಸವಾದ್ಮೇಲೇ ಜೋರಾಗಿ ಇಂಜಿನ್ ತರಹ ಸೀಟಿ ಹೊಡೀಬೇಕೂಂತ ಮಾಡಿಸ್ತೀಯ! ಕಾಲೋನಿಲಿರೋ ಗಂಡಸ್ರೆಲ್ಲಾ ಯಾವಾಗ್ಲೂ ಬಿಳೀ ಪ್ಯಾಂಟು, ಬಿಳೀ ಶರ್ಟು, ಕರಿಕೋಟು ಟೈಲಿ ಓಡಾಡ್ಬೇಕು ಅಂತ ರೂಲ್ಸ್ ಮಾಡ್ತಿಯ!

'ತಪ್ಪೇನೋ ಅದರಲ್ಲಿ?'

■

---

## ಕನ್ನಡದ ಸೊಬಗು

ಕನ್ನಡ ನಮ್ಮ ಆಡು ಭಾಷೆ

ಅಷ್ಟೇ ಅಲ್ಲ

ಕನ್ನಡ ನಮ್ಮ ನೋಡು ಭಾಷೆ

ಕನ್ನಡ ನಮ್ಮ ಕೇಳು ಭಾಷೆ

ಕನ್ನಡ ನಮ್ಮ ಅರಿವಿನ ಭಾಷೆ

ಅನ್ಯಭಾಷೆಗಳೊಂದಿಗೆ

ಒಲುಮೆಯಿಂದಿರುವ ಭಾಷೆ

ಕನ್ನಡ ಎಂದರೆ ಅದೊಂದು ಭಾಷೆ ಅಲ್ಲ

ಕನ್ನಡ ಒಂದು ಸಂಸ್ಕೃತಿ

ಕನ್ನಡ ಒಂದು ಪರಂಪರೆ

ಕನ್ನಡ ಎಂದೆಂದಿಗೂ ಅಜರಾಮರ

## **ನಗೆ ತೋರಣ** ಲೇ: ಸಂಪಟೂರು ವಿಶ್ವನಾಥ್

ಪ್ರಕಾಶಕರು : ಸಪ್ನ ಬುಕ್ ಹೌಸ್ ಪುಟಗಳು 450 : ಬೆಲೆ : 295





ಈಗಾಗಲೇ ತಮ್ಮ ವಿಶಿಷ್ಠ ಕೃತಿಗಳಿಂದ ಮನೆಮಾತಾಗಿರುವ ಸಂಪಟೂರು ವಿಶ್ವನಾಥ್ ಅವರ ನಗೆ ತೋರಣ ಒಂದು ವಿಶಿಷ್ಟ ಕೃತಿ. ಇದು ನಗೆನಡುಗಳ ಸಂಗ್ರಹ. ಲೇಖಕರು ತಾವು ಸಂಗ್ರಹಿಸಿದ ನಗೆಮುತ್ತುಗಳನ್ನು ಒಂದೆಡೆ ಕಲೆಹಾಕುವ ಕೆಲಸವನ್ನು ಕಲಾತ್ಮಕವಾಗಿ ಮಾಡಿದ್ದಾರೆ. ಇದರಲ್ಲಿ 3500 ನಗೆನುಡಿಗಳಿವೆ. ಸುಮಾರು 22 ವಿಭಾಗಗಳಲ್ಲಿ ಅಡಕವಾಗಿರುವ ನಗೆಮುತ್ತುಗಳು ಚೇತೋಹಾರಿಯಾಗಿವೆ. ಅನೇಕ ಹಿರಿಯ ಹಾಸ್ಯ ಲೇಖಕರ ನುಡಿಮುತ್ತುಗಳೂ ಇದರಲ್ಲಿ ಸೇರಿವೆ. ಕೆಲವು ನುಡಿಮುತ್ತುಗಳು ಹೀಗಿವೆ. ಐವತ್ತು ವರ್ಷ ಹಿಂದಿನ ಶಾಲಾಸಹಪಾಠಿಗಳ ಮಿಲನಕ್ಕೆ ಹೋಗಿದ್ದೆ. ಅವರೆಲ್ಲ ಮುದುಕರಾಗಿಬಿಟ್ಟಿದ್ದರು ಹೀಗಾಗಿ ಯಾರೂ ನನ್ನನ್ನು ಗುರುತು ಹಿಡಿಯಲಿಲ್ಲ. ಬೆಳಗಾಗೆದ್ದ ತಕ್ಷಣ ವೇಗವಾಗಿ ಓಡಲು ಪ್ರಾರಂಭಿಸುತ್ತೇನೆ – ನನ್ನ ಔಷಧ ಇರುವ ಡಬ್ಬದೆಡೆಗೆ. ಇಂಥಾ ಸಾವಿರಾರು ನುಡಿಮುತ್ತುಗಳ ಸಂಗ್ರಹವೇ ನಗೆ ತೋರಣ. ನಿಮ್ಮ ಮನೆಯ ಪುಸ್ತಕದ ಕಪಾಟಿನಲ್ಲಿ ಇರಬೇಕಾದ ಅತ್ಯುತ್ತಮ ಸಂಗ್ರಹ.

---

## **ಭಾಷಣಕ್ಕೊಂದು ಭೂಷಣ** ಲೇ:ಸಂಪಟೂರು ವಿಶ್ವನಾಥ್,

ಪ್ರಕಾಶಕರು: ವೈಷ್ಣವಿ ಪ್ರಕಾಶನ ಪುಟಗಳು 188 ಬೆಲೆ:ರೂ. 130




ಮಾತೇ ಮುತ್ತು ಮತ್ತು ಮಾತು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸಬೇಕು ಎನ್ನುವ ಮಾತಿದೆ. ಹೀಗಿರುವಾಗ ಇನ್ನು ಭಾಷಣಕಾರ ಹೇಗಿರಬೇಕು? ಈ ವಿಷಯದ ಕುರಿತೇ ಲೇಖಕರು ಈ ಸಂಗ್ರಹದಲ್ಲಿ ಅನೇಕ ಮಾಹಿತಿಗಳನ್ನು ಕೊಟ್ಟಿದ್ದಾರೆ ಸುಮಾರು ಇಪ್ಪತ್ತೆರಡು ಶೀರ್ಷಿಕೆಗಳ ನಡುವೆ ಮಾತಿನ ಬಗೆಗಿನ ಮುತ್ತಿನಂತಹ ಮಾತುಗಳನ್ನು ಆರಿಸಿ ಕೊಟ್ಟಿದ್ದಾರೆ. ಗಾದೆ ಮಾತುಗಳು, ಕನ್ನಡದ ನುಡಿಗಟ್ಟುಗಳು, ಕನ್ನಡ ಮತ್ತು ಆಂಗ್ಲ ಲೇಖಕರ ನುಡಿ ಮುತ್ತುಗಳು ಈ ಸಂಗ್ರಹದಲ್ಲಿವೆ. ಕೆಲವು ಸಂಗ್ರಹಗಳು ತುಂಬಾ ಆಕರ್ಷಣೀಯವಾಗಿವೆ.

**ಹೊಟ್ಟೆಗೆ ಕಿವಿ ಇಲ್ಲವಾದ್ದರಿಂದ ಹಸಿದವರ ಮುಂದೆ ಭಾಷಣ ಸಲ್ಲದು.**

**ಅವನು ಭಾಷಣ ಮಾಡುವಾಗ ಆಗಾಗ ನೋಡಬೇಕಾಗಿರುವುದು– ಸಮಯವನ್ನಲ್ಲ ಕ್ಯಾಲೆಂಡರನ್ನು.**

**ವಿದ್ಯಾಭ್ಯಾಸ ಎನ್ನುವುದು ಜ್ಞಾನವೃಕ್ಷದಿಂದ ಹಣ್ಣನ್ನು ಕಿತ್ತುಕೊಳ್ಳುವುದೇ ಹೊರತು ಅದೇ ಹಣ್ಣಲ್ಲ.**

**ನಮಗಿಂತ ಮೂರ್ಖರನ್ನು ಕಂಡರೆ ನಮಗೆ ಸಂತೋಷವಾಗುತ್ತದೆ ಮತ್ತು ನಾವು ಅವರನ್ನು ಒಪ್ಪಿಕೊಳ್ಳುತ್ತೇವೆ.**

ಇಂಥಾ ಹಲವಾರು ನುಡಿಮುತ್ತುಗಳ ಸಂಗ್ರಹ ಭಾಷಣಕ್ಕೊಂದು ಭೂಷಣ.

---

## **ಸರಿಯುತ್ತರಗಳು: ಗೊಂಬೆ ನೋಡಿ ಗಾದೆ ಊಹಿಸಿ!**

1) ನೀರಿನಲ್ಲಿ ಮಾಡಿದ ಹೋಮ.
2) ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಹಾಗೆ
3) ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ
4) ಎಲ್ಲರ ಮನೆ ದೋಸೆನೂ ತೂತೇ.
5) ಸಂಕಟ ಬಂದಾಗ ವೆಂಕಟರಮಣ
6) ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ
7) ಅಡ್ಡ ಗೋಡೆಯ ಮೇಲೆ ದೀಪ
8) ಒಬ್ಬ ಚಾಪೆ ಕೆಳಗೆ ತೂರಿದರೆ ಇನ್ನೊಬ್ಬ ರಂಗೋಲಿ ಕೆಳಗೆ ನುಸುಳಿದ.
9) ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡನಂತೆ.

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: 40+4 APARANJI KANNADA MONTHLY.